# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

# MAIN WRITTEN EXAMINATION FOR RECRUITMENT TO THE POST OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗೆ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CIVIL LAW
ದಿವಾಣಿ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 13.03.2021** **Max. Marks: 150**
ದಿನಾಂಕ: 13.03.2021 ಗರಿಷ್ಠ ಅಂಕಗಳು: 150

**TIME: 02-00 pm to 05.00 pm**
ಸಮಯ: ಮಧ್ಯಾಹ್ನ 02.00 ರಿಂದ 05.00 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:

***Main Examination:***

***The Competitive Written Examination for recruitment of District Judges shall consist of:-***

*(i)* ***Written Examination of two papers each of three hours duration with 150 maximum marks of each paper-one in Civil Law and another in Criminal Law.***

*(ii)* ***It is compulsory for all candidates to answer at least one of the papers in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.***

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

*<u>ಮುಖ್ಯ ಪರೀಕ್ಷೆ:</u>*
*ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-*

**(i)** *ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು **150** ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.*

*(ii)* *ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಠ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.*

*2) If there is any difference in the question in English language and Kannada language, the question framed in English language shall prevail.*

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

*3). Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

*ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.*

**1. Frame proper issues on the basis of the following pleadings.** **10 Marks**

## <u>GIST OF PLAINT</u>

The plaintiff is the absolute owner of the suit 'A' schedule property, which measures 03 acres, having purchased the same

vide registered sale deed dated 23.03.2008. From the date of sale deed, plaintiff has been in actual possession and enjoyment of the suit property. The defendant is the adjacent land owner on the southern side of the suit 'A' schedule property. About six months back, plaintiff got measured the suit 'A' schedule property through a surveyor and came to know that the defendant had encroached 15 guntas of the suit 'A' schedule property on its southern side, which is described as the suit 'B' schedule property. The plaintiff requested the defendant to vacate the encroached area and handover the suit 'B' schedule property. But, the defendant refused to vacate the encroachment and has also denied about he encroaching the suit 'B' schedule property and plaintiff's ownership over the same. This made the plaintiff to file the suit.

With the above averments, plaintiff claimed a decree to declare him as the absolute owner of the suit 'A' schedule property and for directing the defendant to handover the possession of the suit 'B' schedule property to him.

**GIST OF WRITTEN STATEMENT**

The defendant categorically denied plaintiff's title and ownership over the suit 'A' schedule property and also denied the allegation of he, encroaching suit 'B' schedule property. According to the defendant, he has been in possession of one acre of land since the year 1995 having purchased the same from plaintiff's vendor vide registered sale deed dated 21.02.1995. The defendant had put up a barbed wire fence and enjoying his property as its absolute owner. The defendant, in the alternate, contended that, he has been in possession of the suit 'B' schedule property since the year 1995

openly, uninterruptedly and to the knowledge of the plaintiff and thereby had acquired title to it by adverse possession. The defendant further contended that the suit was barred by limitation and also bad for non joinder of necessary party, as the vendor of the plaintiff and the defendant was a necessary party to the suit. According to the defendant, the suit was not properly valued and requisite court fee is not paid on the plaint. This Court lacks jurisdiction to try this suit. On all these grounds, the defendant prayed for the dismissal of the suit with costs.

**ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿರಿ:** **10 ಅಂಕಗಳು**

**<u>ವಾದ ಪತ್ರದ ಸಾರಾಂಶ</u>**

ವಾದಿಯು ದಾವಾ 'ಎ' ಷೆಡ್ಯೂಲ್ ಆಸ್ತಿಯಯನ್ನು ದಿನಾಂಕ 23.03.2008ರ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿ ಅದರ ಸಂಪೂರ್ಣ ಮಾಲೀಕನಿದ್ದು ಅದು 3 ಎಕರೆ ವಿಸ್ತೀರ್ಣ ಇರುತ್ತದೆ. ಖರೀದಿ ಪತ್ರ ಆದ ದಿನದಿಂದ ವಾದಿಯು ದಾವಾ ಸ್ವತ್ತಿನ ಸ್ವಂತ ಸ್ವಾಧೀನ ಮತ್ತು ಅನುಭವದಲ್ಲಿ ಇರುತ್ತಾನೆ. ಪ್ರತಿವಾದಿಯು ದಾವಾ 'ಎ' ಷೆಡ್ಯೂಲ್ ಆಸ್ತಿಯ ದಕ್ಷಿಣ ದಿಕ್ಕಿಗೆ ಹೊಂದಿಕೊಂಡಿರುವ ಆಸ್ತಿಯ ಮಾಲೀಕನಿರುತ್ತಾನೆ. ಈಗ್ಗೆ ಸುಮಾರು ಆರು ತಿಂಗಳ ಹಿಂದೆ ವಾದಿಯು ದಾವಾ 'ಎ' ಷೆಡ್ಯೂಲ್ ಸ್ವತ್ತನ್ನು ಓರ್ವ ಮೋಜಣಿದಾರರ ಮೂಲಕ ಅಳತೆ ಮಾಡಿಸಿದನು ಮತ್ತು ಆಗ ಪ್ರತಿವಾದಿಯು ದಾವಾ 'ಎ' ಷೆಡ್ಯೂಲ್ ಸ್ವತ್ತಿನ ದಕ್ಷಿಣ ಭಾಗದಲ್ಲಿರುವ 15 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದು ಕಂಡು ಬಂದಿದ್ದು, ಆ ಆಸ್ತಿಯನ್ನು 'ಬಿ' ಷೆಡ್ಯೂಲ್ ಆಸ್ತಿಯೆಂದು ವಿವರಿಸಲಾಗಿದೆ. ವಾದಿಯು ಪ್ರತಿವಾದಿಯನ್ನು ದಾವಾ 'ಬಿ' ಷೆಡ್ಯೂಲ್ ಆಸ್ತಿಯ ಒತ್ತುವರಿಯನ್ನು ತೆರವುಗೊಳಿಸಿ ಅದರ ಸ್ವಾಧೀನವನ್ನು ಬಿಟ್ಟುಕೊಡಬೇಕೆಂದು ಕೇಳಿಕೊಂಡನು. ಆದರೆ ಪ್ರತಿವಾದಿಯು ಒತ್ತುವರಿಯನ್ನು ತೆರವುಗೊಳಿಸಲು ನಿರಾಕರಿಸಿ, ತಾನು ದಾವಾ 'ಬಿ' ಷೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುವುದನ್ನು ಮತ್ತು ಅದರ ಮೇಲೆ ವಾದಿಯ ಮಾಲೀಕತ್ವವನ್ನು ಅಲ್ಲಗಳೆದಿರುತ್ತಾನೆ. ಆದುದರಿಂದ ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಈ ಮೇಲಿನ ವಿವರಣೆಗಳಿಂದ ವಾದಿಯು ತಾನು ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕ ಎಂದು ಘೋಷಣೆ ಮಾಡಬೇಕು ಮತ್ತು ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ತನಗೆ ಹಸ್ತಾಂತರ ಮಾಡಲು ಪ್ರತಿವಾದಿಗೆ ನಿರ್ದೇಶನ ಕೊಡಬೇಕು ಎಂದು ಪರಿಹಾರ ಕೇಳಿರುತ್ತಾನೆ.

## ಪ್ರತಿವಾದ ಪತ್ರದ ಸಾರಾಂಶ

ಪ್ರತಿವಾದಿಯು ವಾದಿಯು ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಮಾಲೀಕನಿರುವುದು ಮತ್ತು ತಾನು ದಾವಾ 'ಬಿ' ಷೆಡ್ಯೂಲ್ ಸ್ವತ್ತನ್ನು ಅತಿಕ್ರಮಿಸಿರುವುದನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಪ್ರತಿವಾದಿಯ ಪ್ರಕಾರ ಆತನು ಒಂದು ಎಕರೆ ಜಮೀನನ್ನು ವಾದಿಗೆ ಖರೀದಿ ಕೊಟ್ಟವರಿಂದ ದಿನಾಂಕ 21.02.1995ರ ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿ ಆ ಆಸ್ತಿಯು 1995ನೇ ಸಾಲಿನಿಂದ ತನ್ನ ಸ್ವಾಧೀನದಲ್ಲಿದೆ ಎನ್ನುತ್ತಾರೆ. ಪ್ರತಿವಾದಿಯು ಆ ಜಮೀನಿಗೆ ತಂತಿ ಬೇಲಿಯನ್ನು ಹಾಕಿ ಆ ಆಸ್ತಿಯನ್ನು ಅದರ ಸಂಪೂರ್ಣ ಮಾಲೀಕನಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಪ್ರತಿವಾದಿಯು ಪರ್ಯಾಯವಾಗಿ ತಾನು ದಾವಾ 'ಬಿ' ಷೆಡ್ಯೂಲ್ ಸ್ವತ್ತನ್ನು 1995ನೇ ಸಾಲಿನಿಂದ ಎಲ್ಲರಿಗೂ ತಿಳಿದಿರುವಂತೆ ಯಾವುದೇ ತಂಟೆ ತಕರಾರು ಇಲ್ಲದೆ ವಾದಿಯ ಗಮನದಲ್ಲಿ ಇದ್ದು ಅನುಭವಿಸಿಕೊಂಡು ಬಂದಿದ್ದು ಆ ಪ್ರಕಾರ ಆ ಆಸ್ತಿಗೆ ಪ್ರತಿಕೂಲ ಸ್ವಾಧೀನದ ಮೂಲಕ ಮಾಲೀಕತ್ವನ್ನು ಗಳಿಸಿಕೊಂಡಿರುವುದಾಗಿ ಹೇಳುತ್ತಾರೆ. ಪ್ರತಿವಾದಿಯು ಮುಂದುವರಿದು ಈ ದಾವಾ ಕಾಲಮಿತಿಯ ಭಾದೆಗೆ ಒಳಪಟ್ಟಿದ್ದು ಮತ್ತು ವಾದಿ ಮತ್ತು ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದವರನ್ನು ಈ ದಾವೆಗೆ ಸೇರಿಸದೆ ಅವಶ್ಯಕ ಪಕ್ಷಗಾರರನ್ನು ಸೇರಿಸದ ಭಾದೆಗೆ ಒಳಪಟ್ಟಿದೆ ಎನ್ನುತ್ತಾರೆ. ಪ್ರತಿವಾದಿಯ ಪ್ರಕಾರ ಈ ದಾವೆಯನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಮತ್ತು ವಾದ ಪತ್ರದೊಂದಿಗೆ ನಿಗಧಿತ ನ್ಯಾಯಲಾಯದ ಶುಲ್ಕವನ್ನು ಪಾವತಿ ಮಾಡಿಲ್ಲ. ಈ ನ್ಯಾಯಾಲಯಕ್ಕೆ ಈ ದಾವೆಯನ್ನು ವಿಚಾರಿಸಲು ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾರೆ.

**2. Translate the following passage as extracted from a Judgment to Kannada language:** **15 Marks**

**ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.** **15 ಅಂಕಗಳು**

The point to be considered in this case is, whether, the petitioner herein irrespective of being a legitimate or illegitimate child of the respondent and not being a married daughter, is entitled to maintenance, not only during the period when she is a minor, but also after she attains majority, till she gets married, on account of injury being unable to maintain herself. It is noted that the petitioner herein was already seventeen years of age when the petition was filed in the year 2014 and when the petition is

disposed of, she was almost eighteen years of age. The family court has held that the petitioner could seek maintenance after she attains majority. The family court in my view has erred on two counts: firstly, by not awarding any maintenance to the petitioner herein during the minority of the petitioner under Section 125 (1)(b) of Cr.P.C., and secondly, for the period after the petitioner attains majority, by not applying Section 125 (1)(c) of Cr.P.C.

The expression "not being a married daughter" would clearly indicate that a legitimate or illegitimate daughter even if she has attained majority, would be entitled to maintenance till she gets married.

**3. Translate the following passage as extracted from a judgment to English language:** **15 Marks**

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ಪ್ರಸ್ತುತ ಪ್ರಕರಣಕ್ಕೆ ಮೇಲೆ ಹೇಳಲಾದ ಅಭಿಪ್ರಾಯವನ್ನು ಅನ್ವಯಿಸಿದಲ್ಲಿ, ಪ್ರಶ್ನಿತ ಜಮೀನಿನ ಮಾಲೀಕರಾದ ಎದುರುದಾರರು ಕಾಡುಮರಗಳನ್ನು ಕಡಿಯಲು ಅರ್ಜಿಯನ್ನು ಸಲ್ಲಿಸಿರುವರು ಎಂಬುದು ತಿಳಿದುಬರುತ್ತದೆ. ಅವರು ಅನುಬಂಧ-'ಸಿ'ಯ ಪ್ರಶ್ನಿತ ಜಮೀನಿಗೆ ಸಂಬಂಧಿಸಿ ಅವರ ಭೂಮಿಯ ಹಕ್ಕನ್ನು ನೋಡಿದಲ್ಲಿ ಇದು, ಮೋಜಣಿ ಸಂ.97ರಲ್ಲಿ ನಾಲ್ಕು ಎಕರೆ ಜಮೀನಿನ ದರಖಾಸ್ತು ಜಮೀನಿನ ವಿಲೇವಾರಿ ಮಾಡಲು ವಿಶೇಷ ಉಪವಿಭಾಗಾಧಿಕಾರಿ ಚಿಕ್ಕಮಗಳೂರು ಇವರು ವ್ಯವಹರಣೆಗಳನ್ನು ಮಾನ್ಯ ಮಾಡಿರುತ್ತಾರೆ. ಆ ವ್ಯವಹರಣೆಗಳ ಮೇರೆಗೆ, 'ಮಲ್ಕಿ' ಮೌಲ್ಯ ಎಂದರೆ, ಮರಗಳ ಮೌಲ್ಯವನ್ನು ಭೂಮಿಯನ್ನು ಸ್ವಾಧೀನಕ್ಕೆ ನೀಡುವ ಮುಂಚೆ ಅನುದಾನಿತರಿಂದ ಸಂಗ್ರಹ ಮಾಡಲಾಗಿತ್ತು ಎಂಬುದು ತಿಳಿದುಬರುತ್ತದೆ. 3000/-ರೂ. ಮೊತ್ತವನ್ನು ಲೆಕ್ಕಹಾಕಲಾಗಿತ್ತು ಮತ್ತು 'ಮಲ್ಕಿಗಳ' ಮೌಲ್ಯದ ಸಂಬಂಧದಲ್ಲಿ ನೀಡಲಾದ ದಿನಾಂಕದಂದು ಸಂದಾಯ ಮಾಡಲಾಗಿತ್ತೆಂಬುದು ಎದುರುದಾರರ ವಾದವಾಗಿತ್ತು. ಆದಾಗ್ಯೂ, ಎರಡನೇ ಎದುರುದಾರನು ಮಾಡಿರುವ ಹಿಂದೆ ಹೇಳಲಾದ ಸಂದಾಯಕ್ಕೆ ಸಂಬಂಧಪಟ್ಟಂತೆ ತಹಸೀಲ್ದಾರ್‌ನ ಕಚೇರಿಯಲ್ಲಿ ನಿರ್ವಹಿಸಲಾದ ಮೂಲ ರಿಜಿಸ್ಟರಿನಲ್ಲಿ ಸೇರಿಸಲಾಗಿದೆಯೆಂದು ವಾದಿಸಿರುವುದನ್ನು ಮತ್ತು ಸಂದಾಯವನ್ನು ನಿಯಮಗಳ 11ನೇ ನಿಯಮದ ಮೇರೆಗೆ ಮಾಡಲಾಗಿದೆಯೆಂಬುದನ್ನು ಅಪೀಲುದಾರರು

ಅಂಗೀಕರಿಸಿಲ್ಲ. ಆದುದರಿಂದ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, 'ಮಲ್ಕಿಗಳೆಂದು' ಪರಿಗಣಿಸಲಾದ ಪ್ರಶ್ನಿತ ಜಮೀನಿನಲ್ಲಿರುವ ಮರಗಳನ್ನು ಕಡಿದುರುಳಿಸುವ ಅಧಿಕಾರ ಎದುರುದಾರರಿಗಿಲ್ಲವೆಂದು, ರಾಜ್ಯದಲ್ಲಿ ಅವುಗಳನ್ನು ನಿಹಿತಗೊಳಿಸಬೇಕೆಂದು ವಾದಿಸಿದ್ದಾರೆ.

**4.** Explain the conditions to be fulfilled in the matter of production of additional evidence in the Appellate Court; mode of taking additional evidence and the manner in which additional evidence if allowed, to be dealt with by the Appellate Court. **10 Marks**

ಮೇಲ್ಮನವಿ ನ್ಯಾಯಾಲಯದಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ಹಾಜರು ಪಡಿಸಲು ಅವಶ್ಯಕವಿರುವ ನಿಯಮಗಳನ್ನು; ಹೆಚ್ಚುವರಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ವಿಧಾನಗಳನ್ನು ಮತ್ತು ಮೇಲ್ಮನವಿ ನ್ಯಾಯಾಲಯವು ಅನುಮತಿಸಿದ ಹೆಚ್ಚುವರಿ ಸಾಕ್ಷ್ಯವನ್ನು ವ್ಯವಹರಿಸುವ ವಿಧಾನಗಳನ್ನು ವಿವರಿಸಿ. **10 ಅಂಕಗಳು**

**5.** What do you understand by the expression "Part Performance" in Section 53 A of the Transfer of Property Act, 1882? What are the conditions stipulated for enforcement of the right of part performance? Explain with reference to Section 53 A of the Transfer of Property Act, 1882 and Section 17(1A) and proviso to Section 49 of the Registration Act, 1908. **10 Marks**

ಸ್ವತ್ತು ವರ್ಗಾವಣಾ ಅಧಿನಿಯಮ, 1882 ರ ಕಲಂ 53ಎ ಯಲ್ಲಿ ವಿವರಿಸಿರುವ ಪದ "ಭಾಗಶಃ ನೆರವೇರಿಕೆ"ಯನ್ನು ನೀವು ಏನೆಂದು ಅರ್ಥೈಸಿಕೊಂಡಿದ್ದೀರಿ? ಭಾಗಶಃ ನೆರವೇರಿಕೆಯ ಹಕ್ಕನ್ನು ಜಾರಿಗೊಳಿಸಲು ನಿಗದಿಪಡಿಸಿರುವ ನಿಯಮಗಳು ಯಾವುದು? ಸ್ವತ್ತು ವರ್ಗಾವಣಾ ಅಧಿನಿಯಮ, 1982ರ ಕಲಂ 53ಎ ಮತ್ತು ನೊಂದಣಿ ಕಾಯಿದೆ, 1908ರ ಕಲಂ 17(1ಎ) ಮತ್ತು ಕಲಂ 49ರ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**6.** Explain the meaning of temporary, perpetual and mandatory injunctions with reference to Specific Relief Act, 1963. Under what circumstances an injunction cannot be granted? Enumerate. **10 Marks**

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ನ್ನು ಉಲ್ಲೇಖಿಸಿ ತಾತ್ಕಾಲಿಕ, ಖಾಯಂ ಮತ್ತು ಆಜ್ಞಾಸ್ವರೂಪಿ ಪ್ರತಿಬಂಧಕಾಜ್ಞೆ ಇವುಗಳ ಅರ್ಥಗಳನ್ನು ವಿವರಿಸಿ. ಯಾವ ಸಂದರ್ಭಗಳಲ್ಲಿ ಪ್ರತಿಬಂಧಕಾಜ್ಞೆಯನ್ನು ನೀಡಲು ಆಗುವುದಿಲ್ಲ? ವಿವರಿಸಿ. **10 ಅಂಕಗಳು**

**7.** What are the grounds for declaration of a Hindu Marriage as void marriage and voidable marriage? Enumerate the same with reference to the provisions of Hindu Marriage Act, 1955. **10 Marks**

ಹಿಂದೂ ವಿವಾಹವನ್ನು ಅನೂರ್ಜಿತ ವಿವಾಹ ಮತ್ತು ಅನೂರ್ಜಿತಗೊಳಿಸಬಹುದಾದ ವಿವಾಹ ಎಂದು ಘೋಷಿಸಲು ಆಧಾರಗಳು ಯಾವುವು? ಹಿಂದೂ ವಿವಾಹ ಕಾಯಿದೆ, 1955ರ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**8.** What are the requisites of a valid adoption under the Hindu Adoptions and Maintenance Act, 1956? Explain with reference to Sections 6 to 10 of the said Act. What are the effects of an adoption under the aforesaid Act? **10 Marks**

ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆ, 1956ರ ಅಡಿಯಲ್ಲಿ ಕಾನೂನಬದ್ಧ ದತ್ತಕಕ್ಕೆ ಬೇಕಾಗಿರುವ ಅಗತ್ಯತೆಗಳು ಯಾವುದು? ಆ ಕಾಯಿದೆಯ ಕಲಂ 6 ರಿಂದ 10ನ್ನು ಉಲ್ಲೇಖಿಸಿ ವಿವರಿಸಿ. ಆ ಕಾಯಿದೆಯ ಅಡಿಯಲ್ಲಿ ಆದ ದತ್ತಕದ ಪರಿಣಾಮಗಳು ಯಾವುವು? **10 ಅಂಕಗಳು**

**9.** What do Sections 9 and 34 of the Arbitration and Conciliation Act, 1996, as Amended by Act 3 of 2016, deal with? Explain with reference to the said provisions. **10 Marks**

ಕಾಯಿದೆ 3/2016ರ ಮೂಲಕ ತಿದ್ದುಪಡಿಯಾದ ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಕಲಂ 9 ಮತ್ತು 34 ಯಾವುದನ್ನು ವ್ಯವಹರಿಸುತ್ತದೆ? ಆ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**10.** Explain the differences between Fundamental Rights, Fundamental Duties and Directive Principles of State Policy, which are in Part-III, Part-IV A and Part-IV of the Constitution of India. Enumerate at least five Fundamental Rights and five Fundamental Duties. **10 Marks**

ಭಾರತೀಯ ಸಂವಿಧಾನದ ಭಾಗ-III, ಭಾಗ-IVಎ ಮತ್ತು ಭಾಗ-IVರಲ್ಲಿರುವ ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಇವುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ. ಕನಿಷ್ಠ ಐದು ಮೂಲಭೂತ ಹಕ್ಕುಗಳು ಮತ್ತು ಐದು ಮೂಲಭೂತ ಕರ್ತವ್ಯಗಳನ್ನು ಹೆಸರಿಸಿ. **10 ಅಂಕಗಳು**

**11.** Write short notes on **ANY TWO** of the following: **2x5=10 Marks**

(a) Contract of guarantee and contract of indemnity: Differences.

(b) Exclusion of time of proceeding bona fide in Court without jurisdiction and effect of acknowledgement in writing: Sections 14 and 18 of Limitation Act, 1963.

(c) Principles of res judicata.

(d) lis pendens

ಈ ಕೆಳಗಿನ ಪೈಕಿ **ಯಾವುದಾದರು ಎರಡು** ವಿಷಯಗಳ ಮೇಲೆ ಟಿಪ್ಪಣಿ ಬರೆಯಿರಿ: **2x5=10 ಅಂಕಗಳು**

(ಎ) ಖಾತರಿಯ ಒಪ್ಪಂದ ಮತ್ತು ನಷ್ಟ ಪರಿಹಾರದ ಒಪ್ಪಂದ – ವ್ಯತ್ಯಾಸಗಳು

(ಬಿ) ಅಧಿಕಾರ ವ್ಯಾಪ್ತಿ ಇಲ್ಲದ ನ್ಯಾಯಾಲಯದಲ್ಲಿ ಸದ್ವಿಶ್ವಾಸದಿಂದ ಪ್ರಕರಣವನ್ನು ನಡೆಸುತ್ತಿದ್ದ ಸಮಯವನ್ನು ಬಿಟ್ಟುಬಿಡುವುದು ಮತ್ತು ಬರಹದಲ್ಲಿ ನೀಡಿದ ಸ್ವೀಕಾರ ಪತ್ರದ ಪರಿಣಾಮಗಳು. ಕಾಲಪರಿಮಿತಿ ಅಧಿನಿಯಮ, 1963ರ ಕಲಂ 14 ಮತ್ತು 18.

(ಸಿ) ಪೂರ್ವನಿರ್ಣೀತ ನ್ಯಾಯದ ತತ್ವಗಳು

(ಡಿ) ಲಿಸ್ ಪೆಂಡೆನ್ಸ್

**12. Write a judgment on the basis of following facts and evidence with reference to the relevant provisions of law and case law:** **30 Marks**

Smt. Parvathi filed a suit for partition and separate possession of her 1/3rd share over the suit schedule properties, which consist of two house properties adjacent to each other. One Satyanarayana (Defendant No.1) and Lakshminarayana (Defendant No.2) are the elder brothers of the plaintiff. The suit schedule properties are the self acquired properties of their father Krishnappa, who died on 19.08.2016. The mother of the plaintiff and defendants, Smt.Jayamma pre deceased Krishnappa and died on 05.03.2014. The plaintiff, being one of the legal heirs of late Krishnappa, has 1/3rd share in the suit schedule properties. The defendants, in spite of repeated demands and issuance of legal notice, refused to allot the plaintiff's share, by contending that Late Krishnappa had executed a Will in their favour, which made the plaintiff to file the present suit.

The defendants, in their written statement, admitted the relationship between them and the plaintiff and the suit properties as the self acquired properties of their father Krishnappa and also

the date of death of their father and mother. The defendants specifically contended that their father Krishnappa has executed a registered Will on 16.05.2015, when he was in sound disposing state of mind and bequeathed the suit properties in favour of defendant No.1 and 2 and on the basis of the will, defendants became the absolute owners of the suit schedule properties and katha was changed in their favour and the plaintiff has no right to claim share over the suit schedule properties. On all these grounds, defendants prayed for dismissal of the suit with costs.

## ISSUES

1. **Whether the plaintiff proves that she is entitled for a decree for partition and separate possession of her share over the suit schedule properties?**
2. **Whether the defendants prove that their father, Krishnappa, has executed a registered will dated 16.05.2015 bequeathing the suit properties in their favour and thereby they became the absolute owners of the suit schedule properties?**
3. **What order or decree?**

## EVIDENCE ON BEHALF THE PLAINTIFF:

The plaintiff, who was examined as PW.1, deposed about the relationship between the parties and suit properties as self-acquired property of their father, Krishnappa. PW.1 further deposed that she has got a legitimate share in the suit property, as the daughter of Late Krishnappa and defendants had refused to allot her share, inspite of repeated demands and issuance of legal

notice to the defendants. PW.1 further deposed that the Will relied upon by the defendants, said to have been executed by her their father, Krishnappa, was created and concocted by the defendants, in order to grab the suit property.

During the course of her cross examination PW1 denied that her father late Krishnappa was hale and healthy and had absolutely no ailments. PW1 admitted that her father was never hospitalized and his mental condition was stable. PW1 denied the signature on Ex.D1 Will of her father Krishnappa. But she admitted that her father used to sign in English. PW1 admitted that her father and these defendants have performed her marriage. PW1 denied the suggestion that her father late Krishnappa has executed Ex.D1 Will and bequeathed the suit item No.1 and 2 in favour of defendant No.1 and 2.

The plaintiff produced the property extract of the suit properties as per Ex.P.1 and 2, which show that suit properties were initially standing in the name of Late Krishnappa and names of defendant No.1 and 2 were entered as the owners of suit item No.1 and 2 on the basis of the registered Will dated 16.05.2015. Ex.P.3 is the copy of the legal notice issued by the plaintiff to the defendants on 08.09.2017, demanding her share in the suit properties.

**Ex.P1** : Property extract of suit Item No.1.

**Ex.P2** : Property extract of suit Item No.2.

**Ex.P3** : Copy of legal notice dated 08.09.2017.

## EVIDENCE ON BEHALF OF THE DEFENDANTS:

Defendant No.1, who was examined as DW.1, in his evidence admitted the relation between them and plaintiff and also the suit properties being self acquired properties of their father, Krishnappa, and also date of death of their father and mother. DW.1 further deposed that their father, Late Krishnappa, when he was in a sound disposing state of mind, had executed the registered Will dated 16.05.2015 and bequeathed the suit item No.1 and 2 in favour of defendant No.1 and 2 respectively. DW.1 identified the signatures of his father and attesting witnesses found on the Ex.D1 Will, by saying that he was personally present at the time of execution of the said Will. DW.1 further deposed that on the basis of the said Will, they became the absolute owners of the suit properties and plaintiff has no right to claim share over the suit properties.

During the course of his cross examination DW1 admitted that late Krishnappa had no ill will against the plaintiff and he was treating all his children cordially. DW1 denied the suggestion that late Krishnappa's health condition was not good about one and half years prior to his death. DW1 denied the suggestion that they have forged the signature of their father and created Ex.D1 Will in order to grab the suit property and deprive the plaintiff of her legitimate share in the suit property.

The defendants examined one Vinay, son of attesting witness to the Will, late Narasimhaiah, as DW.2 and he deposed that, his father was no more and he was familiar with his father's signature, but he did not find the signature of his father on Ex.D1 Will. The

defendants cross-examined DW.2 by treating him as a hostile witness and even during the cross-examination, DW2 denied the suggestion that his father had signed on Ex.D1 Will as a attesting witness, by saying his father used to sign in Kannada. Counsel for the plaintiff submitted no cross examination to DW2.

The defendants produced registered Will dated 16.05.2015 as per Ex.D1, where in it is recited that Late Krishnappa was looked after by the defendants during his old age and they had performed the marriage of the plaintiff and gave her money and ornaments at the time of her marriage and she was staying comfortably in her husband's house and out of his free will, love and affection, he had bequeathed the suit properties to the defendants. Ex.D2 and 3 are the death certificates of Late Krishnappa and Smt. Jayamma, who died on 19.08.2016 and 05.03.2014 respectively.

**Ex.D1** : Registered Will dated 16.05.2015

**Ex.D2** : Death Certificate of Late Krishnappa

**Ex.D3** : Death Certificate of Late Smt. Jayamma

**ARGUMENT FOR THE PLAINTIFF:**

It is the argument for the plaintiff that there is no dispute about the relationship between the plaintiff and the defendants and that the suit properties as the self acquired properties of their father. It was further argued for the plaintiff that the defendants had failed to prove the execution of the will by examining any one of the attesting witness. It was further argued for the plaintiff that the disputed Will was surrounded by suspicious circumstances, as

one of the natural heirs of Late Krishnappa had been excluded from inheriting the suit properties, without any valid reason and due to the presence of one of the beneficiaries of the Will at the time of its execution. On these grounds, the plaintiff prayed to decree the suit.

## ARGUMENT FOR THE DEFENDANTS:

On the other hand, it was the argument for the defendants that, due to the non availability of attesting witnesses, the defendants had examined DW2, who is the son of one of the attesting witnesses to the will and had proved Ex.D.1 will. It was further argued for the defendants that they had looked after their father and plaintiff is a married daughter, who is staying in her husband's house and since her marriage expenses were taken care of by the defendants and their father, she was excluded from inheriting the suit property. It was further argued for the defendants that though DW.2 had failed to identify the signature of his father, still the execution of the Will can be accepted, since DW1, who was present at the time of executing the Will, has identified the signature of executant and attesting witnesses and it was a registered Will. On these grounds, defendants prayed for dismissal of the suit with costs.

**ಈ ಕೆಳಗಿನ ಸಂಗತಿಗಳು ಮತ್ತು ಸಾಕ್ಷಿಗಳ ಆಧಾರದ ಮೇಲೆ ಸಂಬಂಧಪಟ್ಟ ಕಾನೂನಿನ ನಿಬಂಧನೆಗಳನ್ನು ಮತ್ತು ತೀರ್ಪುಗಳನ್ನು ಉಲ್ಲೇಖಿಸಿ ತೀರ್ಪು ಬರೆಯಿರಿ:** **30 ಅಂಕಗಳು**

ಶ್ರೀಮತಿ ಪಾರ್ವತಿ ತನಗೆ ದಾವಾ ಷೆಡ್ಯೂಲ್ ಆಸ್ತಿಗಳಲ್ಲಿ ಇರುವ 1/3ನೇ ಭಾಗದ ಹಿಸ್ಸೆಯನ್ನು ಪ್ರತ್ಯೇಕಿಸಿ ಅದರ ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವಾವನ್ನು ಸಲ್ಲಿಸಿದ್ದು ದಾವಾ ಸ್ವತ್ತು ಒಂದಕ್ಕೊಂದು ಹೊಂದಿಕೊಂಡಿರುವ ಎರಡು ಮನೆಗಳಾಗಿರುತ್ತವೆ. ಸತ್ಯನಾರಾಯಣ (1ನೇ ಪ್ರತಿವಾದಿ) ಮತ್ತು

ಲಕ್ಷ್ಮಿನಾರಾಯಣ (2ನೇ ಪ್ರತಿವಾದಿ) ವಾದಿಯ ಅಣ್ಣಂದಿರಾಗಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗಳು ದಿನಾಂಕ 19.08.2016ರಂದು ಮೃತಪಟ್ಟ ಅವರ ತಂದೆ ಕೃಷ್ಣಪ್ಪನ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ. ವಾದಿ ಪ್ರತಿವಾದಿಯರ ತಾಯಿ ಶ್ರೀಮತಿ ಜಯಮ್ಮ ಕೃಷ್ಣಪ್ಪ ಮೃತ ಪಡುವ ಮೊದಲೇ ಅಂದರೆ ದಿನಾಂಕ 05.03.2014ರಂದು ಮೃತ ಪಟ್ಟಿದ್ದರು. ಮೃತ ಕೃಷ್ಣಪ್ಪನ ಕಾನೂನುಬದ್ದ ವಾರಸುದಾರಳಾಗಿ ವಾದಿಗೆ ದಾವಾ ಷೆಡ್ಯೂಲ್ ಆಸ್ತಿಗಳಲ್ಲಿ 1/3ನೇ ಭಾಗದ ಹಿಸ್ಸೆ ಇರುತ್ತದೆ. ಪ್ರತಿವಾದಿಯರ ಬಳಿ ಸಾಕಷ್ಟು ಬಾರಿ ಕೇಳಿಕೊಂಡಿದ್ದರೂ ಮತ್ತು ಅವರಿಗೆ ನೋಟೀಸು ಕೊಟ್ಟಿದ್ದರೂ ಕೂಡ ಪ್ರತಿವಾದಿಯರು ವಾದಿಗೆ ಹಿಸ್ಸೆ ಕೊಡಲು ನಿರಾಕರಿಸಿ, ಮೃತ ಕೃಷ್ಣಪ್ಪನು ಅವರ ಪರವಾಗಿ ಒಂದು ಉಯಿಲು ನಾಮೆಯನ್ನು ಬರೆದಿದ್ದಾಗಿ ಸಾಧಿಸಿದ್ದು ಆ ಕಾರಣದಿಂದ ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಅವರ ಮತ್ತು ವಾದಿಯ ನಡುವಿನ ಸಂಬಂಧವನ್ನು ಮತ್ತು ದಾವಾ ಆಸ್ತಿಯು ಅವರ ತಂದೆ ಕೃಷ್ಣಪ್ಪನ ಸ್ವಯಾರ್ಜಿತ ಆಸ್ತಿ ಎಂಬುದನ್ನು ಮತ್ತು ತಮ್ಮ ತಂದೆ ಮತ್ತು ತಾಯಿ ಇವರ ಮರಣದ ದಿನಾಂಕವನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯರ ಪ್ರಕಾರ ಅವರ ತಂದೆ ವಿಲೇವಾರಿ ಮಾಡುವ ಮನಸ್ಸಿನ ಸುಸ್ಥಿತಿಯಲ್ಲಿದ್ದಾಗ ದಿನಾಂಕ 16.05.2015ರಂದು ಒಂದು ನೊಂದಾಯಿತ ಉಯಿಲು ನಾಮೆಯನ್ನು ಬರೆದು ದಾವಾ ಸ್ವತ್ತುಗಳನ್ನು ಪ್ರತಿವಾದಿಯರಿಗೆ ಉಯಿಲು ಮಾಡಿದ್ದರು ಮತ್ತು ಆ ಉಯಿಲು ನಾಮೆಯ ಆಧಾರದ ಮೇಲೆ ಪ್ರತಿವಾದಿಯರು ದಾವಾ ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾದರು ಮತ್ತು ಅವರ ಹೆಸರಲ್ಲಿ ಖಾತಾ ಬದಲಾವಣೆ ಕೂಡ ಆಗಿದ್ದು ವಾದಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಕೇಳುವ ಹಕ್ಕು ಇರುವುದಿಲ್ಲ ಎಂದು ಸಾಧಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ವಿನಂತಿಸಿದ್ದಾರೆ.

## ವಿವಾದಾಂಶಗಳು

1. **ವಾದಿಯು ತನಗೆ ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನದ ಡಿಕ್ರಿಯನ್ನು ಪಡೆಯಲು ಅರ್ಹತೆ ಇದೆ ಎಂದು ಸಾಬೀತು ಪಡಿಸುತ್ತಾಳೆಯೇ?**

2. **ಪ್ರತಿವಾದಿಯರು ಅವರ ತಂದೆ ಕೃಷ್ಣಪ್ಪ ದಿನಾಂಕ 16.05.2015ರಂದು ಒಂದು ನೊಂದಾಯಿತ ಉಯಿಲು ನಾಮೆಯನ್ನು ಬರೆದು ದಾವಾ ಆಸ್ತಿಯನ್ನು ಅವರಿಗೆ ಉಯಿಲು ಮಾಡಿದ್ದರು ಮತ್ತು ಆ ಮೂಲಕ ಅವರು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಎನ್ನುವುದನ್ನು ಸಾಬೀತು ಪಡಿಸುತ್ತಾರೆಯೇ?**

3. **ಯಾವ ಆದೇಶ ಯಾ ಡಿಕ್ರಿ?**

## ವಾದಿಯ ಪರ ಸಾಕ್ಷ್ಯ

ವಾದಿಯು ವಾ.ಸಾ.1 ಎಂದು ಸಾಕ್ಷಿ ನುಡಿಯುತ್ತಾ ಪಕ್ಷಗಾರರ ನಡುವಿನ ಸಂಬಂಧಗಳ ಬಗ್ಗೆ ಮತ್ತು ದಾವಾ ಆಸ್ತಿ ಅವರ ತಂದೆ ಕೃಷ್ಣಪ್ಪನವರ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ಮೃತ ಕೃಷ್ಣಪ್ಪನ ಮಗಳಾಗಿ ಆಕೆಗೆ ದಾವಾ ಆಸ್ತಿಯಲ್ಲಿ ಕಾನೂನುಬದ್ಧ ಹಿಸ್ಸೆ ಇದ್ದು ಪ್ರತಿವಾದಿಯರು ಸತತವಾಗಿ ಕೇಳಿಕೊಂಡರೂ ಮತ್ತು ನೋಟೀಸು ಕೊಟ್ಟಿದ್ದರೂ ಕೂಡ ಅವಳ ಹಿಸ್ಸೆಯನ್ನು ಕೊಡಲು ನಿರಾಕರಿಸಿರುವುದಾಗಿ ಹೇಳುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ಪ್ರತಿವಾದಿಯರು ಅವರ ಪರವಾಗಿ ಅವರ ತಂದೆ ಕೃಷ್ಣಪ್ಪ ಬರೆದುಕೊಟ್ಟಿದ್ದಾರೆ ಎಂದು ಹೇಳುವ ಉಯಿಲು ನಾಮೆಯು ಒಂದು ಸೃಷ್ಟಿತ ಮತ್ತು ದಾವಾ ಆಸ್ತಿಯನ್ನು ಕಬಳಿಸಲು ಪ್ರತಿವಾದಿಯರು ಸಂಯೋಜಿಸಿದ ದಾಖಲೆ ಎಂದು ನುಡಿಯುತ್ತಾರೆ.

ವಾ.ಸಾ.1 ತನ್ನ ಪಾಟೀ ಸವಾಲಿನಲ್ಲಿ ಆಕೆಯ ತಂದೆ ಮೃತ ಕೃಷ್ಣಪ್ಪ ಸಂಪೂರ್ಣವಾಗಿ ಆರೋಗ್ಯವಾಗಿ ಇದ್ದರು ಮತ್ತು ಅವರಿಗೆ ಯಾವುದೇ ಕಾಯಿಲೆಗಳು ಇರಲಿಲ್ಲ ಎನ್ನುವುದನ್ನು ನಿರಾಕರಿಸಿದ್ದಾರೆ. ವಾ.ಸಾ.1 ತನ್ನ ತಂದೆಯನ್ನು ಯಾವತ್ತೂ ಆಸ್ಪತ್ರೆಗೆ ದಾಖಲು ಮಾಡಿರಲಿಲ್ಲ ಮತ್ತು ಅವರು ಮಾನಸಿಕವಾಗಿ ಸುಸ್ಥಿತಿಯಲ್ಲಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾ.ಸಾ.1 ನಿಶಾನೆ ಡಿ.1 ಉಯಿಲು ನಾಮೆಯಲ್ಲಿ ಆಕೆಯ ತಂದೆ ಕೃಷ್ಣಪ್ಪನ ಸಹಿ ಇರುವುದನ್ನು ನಿರಾಕರಿಸಿದ್ದು ಆದರೆ ತನ್ನ ತಂದೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವಾ.ಸಾ.1 ಆಕೆಯ ಮದುವೆಯನ್ನು ತನ್ನ ತಂದೆ ಮತ್ತು ಈ ಪ್ರತಿವಾದಿಯರು ಮಾಡಿರುವುದನ್ನು ಒಪ್ಪಿಕೊಳ್ಳುತ್ತಾರೆ. ವಾ.ಸಾ.1 ಆಕೆಯ ತಂದೆ ಮೃತ ಕೃಷ್ಣಪ್ಪ ನಿಶಾನೆ ಡಿ.1 ಉಯಿಲು ನಾಮೆಯನ್ನು ಬರೆದು ದಾವಾ ಐಟಂ ನಂ.1 ಮತ್ತು 2ನ್ನು 1 ಮತ್ತು 2ನೇ ಪ್ರತಿವಾದಿಯರಿಗೆ ಉಯಿಲು ಮಾಡಿಕೊಟ್ಟಿದ್ದರು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ವಾದಿಯು ದಾವಾ ಆಸ್ತಿಗಳ ಆಸ್ತಿ ನಕಲುಗಳನ್ನು ನಿಶಾನೆ ಪಿ.1 ಮತ್ತು 2 ಎಂದು ಹಾಜರು ಪಡಿಸಿದ್ದು ಅವುಗಳು ದಾವಾ ಆಸ್ತಿ ಮೂಲತಃ ಮೃತ ಕೃಷ್ಣಪ್ಪನ ಹೆಸರಲಿದ್ದು ದಿನಾಂಕ 16.05.2015ರ ನೊಂದಾಯಿತ ಉಯಿಲು ನಾಮೆಯ ಪ್ರಕಾರ 1 ಮತ್ತು 2ನೇ ಪ್ರತಿವಾದಿಯರ ಹೆಸರು ದಾವಾ ಐಟಂ ನಂ.1 ಮತ್ತು 2ರ ಮಾಲೀಕರು ಎಂಬುದಾಗಿ ದಾಖಾಲಾಗಿದ್ದು ತೋರಿಸುತ್ತದೆ. ನಿಶಾನೆ ಪಿ.3 ದಿನಾಂಕ 08.09.2017ರಂದು ವಾದಿಯು ಪ್ರತಿವಾದಿಯರಿಗೆ ಆಕೆಯ ಹಿಸ್ಸೆ ಕೋರಿ ಕಳುಹಿಸಿದ ನೋಟೀಸಿನ ಪ್ರತಿಯಾಗಿದೆ.

**ನಿಶಾನೆ ಪಿ.1:** ದಾವಾ ಐಟಂ ನಂ.1ರ ಆಸ್ತಿ ನಕಲು

**ನಿಶಾನೆ ಪಿ.2:** ದಾವಾ ಐಟಂ ನಂ.2ರ ಆಸ್ತಿ ನಕಲು

**ನಿಶಾನೆ ಪಿ.3:** ದಿನಾಂಕ 08.09.2017ರ ನೋಟೀಸಿನ ನಕಲು

**ಪ್ರತಿವಾದಿಯ ಪರ ಸಾಕ್ಷ್ಯ**

1ನೇ ಪ್ರತಿವಾದಿಯು ಪ್ರ.ಸಾ.1 ಎಂದು ಸಾಕ್ಷಿ ನುಡಿಯುತ್ತಾ ತಮ್ಮ ಮತ್ತು ವಾದಿಯ ನಡುವಿನ ಸಂಬಂಧವನ್ನು ಮತ್ತು ದಾವಾ ಆಸ್ತಿಯು ಅವರ ತಂದೆ ಕೃಷ್ಣಪ್ಪನವರ ಸ್ವಯಾರ್ಜಿತ ಆಸ್ತಿ ಎಂಬುದನ್ನು ಮತ್ತು ತಮ್ಮ ತಂದೆ ತಾಯಿಯರ ಮರಣ ದಿನಾಂಕವನ್ನು ಒಪ್ಪಿಕೊಂಡಿದ್ದಾರೆ. ಪ್ರ.ಸಾ.1 ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಮೃತ ಕೃಷ್ಣಪ್ಪ ತಾನು ವಿಲೇವಾರಿ ಮಾಡುವ ಮನಸ್ಸಿನ ಸುಸ್ಥಿತಿಯಲ್ಲಿದ್ದಾಗ ದಿನಾಂಕ 16.05.2015ರಂದು ಒಂದು ನೊಂದಾಯಿತ ಉಯಿಲು ನಾಮೆಯನ್ನು ಬರೆದು ದಾವಾ ಐಟಂ ನಂ.1 ಮತ್ತು 2ನ್ನು ಕ್ರಮವಾಗಿ 1 ಮತ್ತು 2ನೇ ಪ್ರತಿವಾದಿಯರಿಗೆ ಉಯಿಲು ಮಾಡಿದ್ದರು ಎಂದು ನುಡಿಯುತ್ತಾರೆ. ಪ್ರ.ಸಾ.1 ಆ ಉಯಿಲು ನಾಮೆಯನ್ನು ಬರೆಯುವ ಕಾಲಕ್ಕೆ ತಾನು ಸ್ವತಃ ಹಾಜರಿದ್ದೆ ಎಂದು ಹೇಳಿ ನಿಶಾನೆ ಡಿ.1 ಉಯಿಲು ನಾಮೆಯಲ್ಲಿರುವ ತನ್ನ ತಂದೆ ಮತ್ತು ದೃಡೀಕರಿಸಿದ ಸಾಕ್ಷಿದಾರರ ಸಹಿಗಳನ್ನು ಗುರುತಿಸಿದ್ದಾರೆ. ಪ್ರ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ಆ ಉಯಿಲು ನಾಮೆಯ ಆಧಾರದ ಮೇಲೆ ತಾವು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದು ವಾದಿಗೆ ದಾವಾ ಆಸ್ತಿಯ ಮೇಲೆ ಹಿಸ್ಸೆ ಕೇಳಲು ಯಾವುದೇ ಹಕ್ಕು ಇಲ್ಲ ಎಂದು ನುಡಿಯುತ್ತಾರೆ.

ಪ್ರ.ಸಾ.1 ತನ್ನ ಪಾಟೀ ಸವಾಲಿನಲ್ಲಿ ಮೃತ ಕೃಷ್ಣಪ್ಪನಿಗೆ ವಾದಿಯ ವಿರುದ್ಧ ಯಾವುದೇ ದ್ವೇಷ ಇರಲಿಲ್ಲ ಮತ್ತು ಅವರು ತನ್ನ ಎಲ್ಲಾ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ಮೃತ ಕೃಷ್ಣಪ್ಪನ ಆರೋಗ್ಯ ಸ್ಥಿತಿ ಅವರು ತೀರಿಕೊಳ್ಳುವ ಸುಮಾರು ಒಂದುವರೆ ವರ್ಷ ಹಿಂದಿನಿಂದ ಚೆನ್ನಾಗಿ ಇರಲಿಲ್ಲ ಎನ್ನುವುದನ್ನು ನಿರಾಕರಿಸಿರುತ್ತಾರೆ. ಪ್ರ.ಸಾ.1 ತಾವು ತಮ್ಮ ತಂದೆಯ ಸಹಿಗಳನ್ನು ನಕಲು ಮಾಡಿ ದಾವಾ ಆಸ್ತಿಯನ್ನು ಕಬಳಿಸಲು ಮತ್ತು ವಾದಿಗೆ ದಾವಾ ಆಸ್ತಿಯ ಮೇಲೆ ಇರುವ ಕಾನೂನುಬದ್ಧ ಹಿಸ್ಸೆಯನ್ನು ಕೊಡುವುದನ್ನು ತಪ್ಪಿಸಲು ನಿಶಾನೆ ಡಿ.1 ಉಯಿಲು ನಾಮೆಯನ್ನು ಸೃಷ್ಟಿ ಮಾಡಿರುತ್ತೇವೆ ಎನ್ನುವ ಸೂಚನೆಯನ್ನು ನಿರಾಕರಿಸಿರುತ್ತಾರೆ.

ಪ್ರತಿವಾದಿಯರು ಉಯಿಲು ನಾಮೆಯ ದೃಢೀಕೃತಸಾಕ್ಷಿ ಮೃತ ನರಸಿಂಹಯ್ಯನವರ ಮಗ ವಿನಯ್ ಎನ್ನುವವರನ್ನು ಪ್ರ.ಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿದ್ದು ಅವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತನ್ನ ತಂದೆ ಈಗ ತೀರಿಕೊಂಡಿದ್ದು ಮತ್ತು ಆತನಿಗೆ ತನ್ನ ತಂದೆಯ ಸಹಿಯ ಪರಿಚಯ ಇದ್ದು ನಿಶಾನೆ ಡಿ.1 ಉಯಿಲು ನಾಮೆಯಲ್ಲಿ ಆತನ ತಂದೆಯ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು

ಪ್ರ.ಸಾ.2 ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು ತಮ್ಮ ಪಾಟೀ ಸವಾಲಿನಲ್ಲಿಯು ಕೂಡ ಪ್ರ.ಸಾ.2 ನಿಶಾನೆ ಡಿ.1 ಉಯಿಲು ನಾಮೆಗೆ ತನ್ನ ತಂದೆ ದೃಢೀಕೃತ ಸಾಕ್ಷಿಯಾಗಿ ಸಹಿ ಮಾಡಿದ್ದರು ಎನ್ನುವುದನ್ನು ನಿರಾಕರಿಸಿ ತನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾದಿ ಪರ ವಕೀಲರು ಪ್ರ.ಸಾ.2 ರವರಿಗೆ ತಮ್ಮ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಪ್ರತಿವಾದಿಯರು ದಿನಾಂಕ 16.05.2015ರ ನೊಂದಾಯಿತ ಉಯಿಲು ನಾಮೆಯನ್ನು ನಿಶಾನೆ ಡಿ.1 ಎಂದು ಹಾಜರು ಪಡಿಸಿದ್ದು ಆ ಉಯಿಲು ನಾಮೆಯಲ್ಲಿ ಮೃತ ಕೃಷ್ಣಪ್ಪನನ್ನು ಆತನ ವಯಸ್ಸಾದ ಕಾಲದಲ್ಲಿ ಪ್ರತಿವಾದಿಯರು ನೋಡಿಕೊಂಡಿದ್ದು ಮತ್ತು ವಾದಿಯ ಮದುವೆಯನ್ನು ಅವರೆಲ್ಲರೂ ಸೇರಿ ಮಾಡಿದ್ದು ವಾದಿಗೆ ಆಕೆಯ ಮದುವೆ ಕಾಲದಲ್ಲಿ ಹಣ ಮತ್ತು ಒಡವೆಗಳನ್ನು ಕೊಟ್ಟಿರುವುದಾಗಿ ಮತ್ತು ಆಕೆ ತನ್ನ ಗಂಡನ ಮನೆಯಲ್ಲಿ ಚೆನ್ನಾಗಿ ಇರುತ್ತಾಳೆ ಮತ್ತು ತನ್ನ ಸ್ವಂತ ಇಚ್ಛೆಯಿಂದ ಮತ್ತು ಪ್ರತಿವಾದಿಯರ ಮೇಲಿನ ಪ್ರೀತಿ ಮತ್ತು ವಿಶ್ವಾಸದ ಕಾರಣದಿಂದ ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಉಯಿಲು ಮಾಡಿರುವುದಾಗಿ ಬರೆಯಲಾಗಿದೆ. ನಿಶಾನೆ ಡಿ.2 ಮತ್ತು 3 ಮೃತ ಕೃಷ್ಣಪ್ಪ ಮತ್ತು ಶ್ರೀಮತಿ ಜಯಮ್ಮಳ ಮರಣ ಪ್ರಮಾಣ ಪತ್ರಗಳಾಗಿದ್ದು ಅವರು ಕ್ರಮವಾಗಿ ದಿನಾಂಕ 19.08.2016 ಮತ್ತು 05.03.2014ರಂದು ಮೃತ ಪಟ್ಟಿದ್ದರು.

**ನಿಶಾನೆ.ಡಿ1:** ದಿನಾಂಕ 16.05.2015ರ ನೊಂದಾಯಿತ ಉಯಿಲು ನಾಮೆ

**ನಿಶಾನೆ.ಡಿ2:** ಮೃತ ಕೃಷ್ಣಪ್ಪನ ಮರಣ ಪ್ರಮಾಣ ಪತ್ರ

**ನಿಶಾನೆ.ಡಿ3:** ಮೃತ ಜಯಮ್ಮಳ ಮರಣ ಪ್ರಮಾಣ ಪತ್ರ

## ವಾದಿಯ ಪರವಾಗಿ ವಾದ

ವಾದಿಯ ಪರವಾಗಿ ವಾದ ಮಂಡಿಸುತ್ತಾ ವಾದಿ ಮತ್ತು ಪ್ರತಿವಾದಿಯ ನಡುವಿನ ಸಂಬಂಧದ ಬಗ್ಗೆ ಮತ್ತು ದಾವಾ ಆಸ್ತಿಯು ಅವರ ತಂದೆಯ ಸ್ವಯಾರ್ಜಿತ ಆಸ್ತಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎನ್ನುತ್ತಾರೆ. ಮುಂದುವರಿದು ಪ್ರತಿವಾದಿಯರು ಉಯಿಲು ನಾಮೆಯ ಯಾವುದೇ ಒಬ್ಬ ದೃಢೀಕೃತ ಸಾಕ್ಷಿಯನ್ನು ವಿಚಾರಣೆ ಮಾಡದೇ ಉಯಿಲು ನಾಮೆಯನ್ನು ಸಾಬೀತು ಪಡಿಸಿಲ್ಲ ಎಂದು ವಾದಿಸುತ್ತಾರೆ. ವಿವಾದಿತ ಉಯಿಲು ನಾಮೆಯ ಮೂಲಕ ಮೃತ ಕೃಷ್ಣಪ್ಪನ ನೈಸರ್ಗಿಕ ವಾರಸುದಾರ ಆಸ್ತಿಯನ್ನು ಅನುವಂಶಿಕವಾಗಿ ಪಡೆಯುವುದನ್ನು ಯಾವುದೇ ಕಾರಣವಿಲ್ಲದೆ ಹೊರಗಿಟ್ಟಿದ್ದು ಮತ್ತು ಉಯಿಲು ನಾಮೆಯ ಒಬ್ಬ ಫಲಾನುಭವಿಯು ಅದನ್ನು ಬರೆಯುವ ಕಾಲಕ್ಕೆ ಸ್ವತಃ ಹಾಜರಿರುವುದು ಉಯಿಲು ನಾಮೆಯ ಸುತ್ತ ಇರುವ ಅನುಮಾನಾಸ್ಪದ ಸಂದರ್ಭಗಳು ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ವಾದಿಯು ದಾವಾವನ್ನು ಡಿಕ್ರಿ ಮಾಡಲು ಕೇಳಿಕೊಂಡಿದ್ದಾರೆ.

## ಪ್ರತಿವಾದಿ ಪರ ವಾದ

ಪ್ರತಿವಾದಿ ಪರ ದೃಡೀಕೃತ ಸಾಕ್ಷಿಯು ಅಲಭ್ಯವಾಗಿರುವ ಕಾರಣ ಪ್ರತಿವಾದಿಯರು ದೃಡೀಕೃತ ಸಾಕ್ಷಿಯ ಮಗನಾದ ಪ್ರ.ಸಾ.2 ರವರನ್ನು ಸಾಕ್ಷಿಯಾಗಿ ಮಾಡಿ ನಿಶಾನೆ ಡಿ.1 ಉಯಿಲು ನಾಮೆಯನ್ನು ಸಾಬೀತು ಪಡಿಸಿರುವುದಾಗಿ ವಾದಿಸುತ್ತಾರೆ. ಮುಂದುವರಿದು ಪ್ರತಿವಾದಿಯರು ಅವರ ತಂದೆಯನ್ನು ನೋಡಿಕೊಂಡಿದ್ದು ವಾದಿಯು ಮದುವೆಯಾದ ಮಗಳಾಗಿದ್ದು ತನ್ನ ಗಂಡನ ಮನೆಯಲ್ಲಿ ಇರುತ್ತಾಳೆ ಮತ್ತು ಆಕೆಯ ಮದುವೆ ಖರ್ಚುಗಳನ್ನು ಪ್ರತಿವಾದಿಯರು ಮತ್ತು ಅವರ ತಂದೆ ನೋಡಿಕೊಂಡಿದ್ದರಿಂದ ಆಕೆಯನ್ನು ದಾವಾ ಆಸ್ತಿಯಲ್ಲಿ ಹಿಸ್ಸೆ ಪಡೆಯುವುದಕ್ಕೆ ಹೊರತುಪಡಿಸಲಾಗಿತ್ತು ಎಂದು ವಾದಿಸುತ್ತಾರೆ. ಮುಂದುವರಿದು ಪ್ರ.ಸಾ.2 ತನ್ನ ತಂದೆಯ ಸಹಿಯನ್ನು ಗುರುತಿಸಲು ವಿಫಲವಾಗಿದ್ದರೂ ಕೂಡ ಪ್ರ.ಸಾ.1 ತಾನು ಉಯಿಲು ನಾಮೆಯನ್ನು ಬರೆಯುವ ಕಾಲಕ್ಕೆ ಸ್ವತಃ ಹಾಜರಿದ್ದು ಉಯಿಲು ನಾಮೆಯನ್ನು ಬರೆದವರ ಮತ್ತು ದೃಡೀಕರಣ ಸಾಕ್ಷಿದಾರರ ಸಹಿಗಳನ್ನು ಗುರುತಿಸಿರುವುದರಿಂದ ಮತ್ತು ಅದೊಂದು ನೊಂದಾಯಿತ ಉಯಿಲು ನಾಮೆ ಆಗಿರುವುದರಿಂದ ಆ ಉಯಿಲು ನಾಮೆಯನ್ನು ಬರೆದಿರುವುದನ್ನು ಒಪ್ಪಿಕೊಳ್ಳಬಹುದು ಎಂದು ಪ್ರತಿವಾದಿ ಪರ ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವೆಯನ್ನು ಖರ್ಚು ಸಹಿತ ವಜಾ ಮಾಡಲು ಕೋರಿಕೊಂಡಿದ್ದಾರೆ.

********

# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POST OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗೆ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CRIMINAL LAW
ಅಪರಾಧಿಕ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 14.03.2021** ದಿನಾಂಕ: 14.03.2021

**Max. Marks: 150** ಗರಿಷ್ಟ ಅಂಕಗಳು: 150

**TIME: 2.00 pm to 5.00 pm**
ಸಮಯ: ಮಧ್ಯಾಹ್ನ 2.00 ರಿಂದ 5.00 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:

***Main Examination:***

***The Competitive Written Examination for recruitment of District Judges shall consist of:-***

*(i)* ***Written Examination of two papers each of three hours duration with 150 maximum marks of each paper-one in Civil Law and another in Criminal Law.***

*(ii)* ***It is compulsory for all candidates to answer at least one of the papers in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.***

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

*<u>ಮುಖ್ಯ ಪರೀಕ್ಷೆ:</u>*

*ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-*

*(i)* *ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು **150** ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.*

*(ii)* *ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.*

*2) If there is any difference in the question in English language and Kannada language, the question framed in English language shall prevail.*

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

*3) Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

*ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.*

**1. Frame the appropriate charge for trial of an accused on the basis of the following charge sheet material:** **15 Marks**

Srirangapatna Police have filed the charge sheet by alleging that accused Sridhara developed friendship with the victim girl, aged 16 years, who was a minor and told her that he would marry

her. On 02.03.2017 at about 10.30 a.m. accused called the victim girl near Kaveri River Bridge, Srirangapatna and kidnapped her on a motorbike bearing Registration No.KA-20-AB-1567 with an intention to have sexual intercourse with her and took her to the house of CW13 at Pandavapura and inspite of knowing that she was a minor, accused wrongfully confined her in that house for 5 days and had forcible sexual intercourse with her and committed penetrative sexual assault on her.

**ಈ ಕೆಳಕಂಡ ದೋಷಾರೋಪಣ ಪತ್ರದ ಆಧಾರದ ಮೇಲೆ ಆರೋಪಿಯ ವಿರುದ್ಧ ಸೂಕ್ತ ದೋಷಾರೋಪಣೆಯನ್ನು ರೂಪಿಸಿ:** **15 ಅಂಕಗಳು**

ಆರೋಪಿ ಶ್ರೀಧರ 16 ವರ್ಷ ವಯಸ್ಸಿನ ಅಪ್ರಾಪ್ತೆ ನೊಂದ ಹುಡುಗಿಯೊಂದಿಗೆ ಗೆಳೆತನವನ್ನು ಬೆಳೆಸಿ ತಾನು ಆಕೆಯನ್ನು ಮದುವೆಯಾಗುವುದಾಗಿ ಹೇಳಿ ದಿನಾಂಕ 02.03.2017ರಂದು ಬೆಳಗ್ಗೆ ಸುಮಾರು 10.30 ಗಂಟೆಗೆ ನೊಂದ ಹುಡುಗಿಯನ್ನು ಶ್ರೀರಂಗಪಟ್ಟಣದ ಕಾವೇರಿ ನದಿ ಸೇತುವೆ ಬಳಿ ಕರೆಯಿಸಿ ಆಕೆಯೊಂದಿಗೆ ಲೈಂಗಿಕ ಸಂಭೋಗ ಮಾಡುವ ಉದ್ದೇಶದಿಂದ ಕೆಎ–20–ಎಬಿ–1567 ನೊಂದಣಿ ಸಂಖ್ಯೆಯ ಒಂದು ಮೋಟಾರು ಬೈಕಿನಲ್ಲಿ ಆಕೆಯನ್ನು ಅಪಹರಿಸಿಕೊಂಡು ಪಾಂಡವಪುರದಲ್ಲಿರುವ ಚಾ.ಸಾ.13ರವರ ಮನೆಗೆ ಕರೆದುಕೊಂಡು ಹೋಗಿ, ಆಕೆ ಅಪ್ರಾಪ್ತ ವಯಸ್ಕಳು ಎಂದು ಗೊತ್ತಿದ್ದರು ಕೂಡ ಆರೋಪಿಯು ಆಕೆಯನ್ನು 5 ದಿನಗಳ ಕಾಲ ಆ ಮನೆಯಲ್ಲಿ ಅಕ್ರಮ ಬಂಧನದಲ್ಲಿ ಇರಿಸಿ ಆಕೆಯೊಂದಿಗೆ ಬಲಾತ್ಕಾರವಾಗಿ ಲೈಂಗಿಕ ಸಂಭೋಗವನ್ನು ನಡೆಸಿ, ಆಕೆಯ ಮೇಲೆ ತೀವ್ರವಾದ ಲೈಂಗಿಕ ದೌರ್ಜನ್ಯವನ್ನು ಎಸಗಿರುತ್ತಾನೆ ಎಂದು ಶ್ರೀರಂಗಪಟ್ಟಣ ಪೋಲಿಸರು ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು.

**2. Translate the following passage as extracted from a Judgment to Kannada language:** **15 Marks** **15 ಅಂಕಗಳು**

**ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.**

In dealing with Corruption cases and also bearing in mind the impact of Corruption on the society, which is spreading like a cancerous disease, the Court should be very careful and cautious in appreciating the materials on record before adverting to quash the

proceedings or discharging the accused. The Court should be vigilant to ascertain as to whether the proceedings are so vitiated and that the irregularity or illegality had prejudiced the accused and had resulted in a miscarriage of justice. Merely because there was some illegality or irregularity in the investigation or that the investigating officer had some animus against the accused or that the investigation was being supervised by a person, who was interested, cannot by itself lead to an inference that the accused had necessarily been denied a fair trial. Before an accused can in such circumstances claim that he has been prejudiced he has to indicate precisely the manner in which a fair trial has been prejudiced or denied to him.

**3. Translate the following passage as extracted from a Judgment to English language:** **15 Marks**

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ಈಗಾಗಲೇ ಒಪ್ಪಿಕೊಳ್ಳಲಾದಂತೆ, ಮೀನಾದೇವಿ (ಮೃತಳು) ಸುಟ್ಟಗಾಯದ ಕಾರಣದಿಂದ ಎಂದರೆ ಆಕೆಯ ವಿವಾಹವಾದ ಏಳು ವರ್ಷಗಳೊಳಗೆ ಸಹಜ ಪರಿಸ್ಥಿತಿಗಳಿಗಿಂತ ಭಿನ್ನವಾಗಿ ಮೃತಪಟ್ಟಿದ್ದಾಳೆ. ಫಿರ್ಯಾದುದಾರ (ಪಿ.ಡಬ್ಲ್ಯೂ.9) ಮೃತಳ ತಂದೆ ವಿವಾಹದ ಸಂದರ್ಭದಲ್ಲಿ ತಾನು ಡಬಲ್ ಬೆಡ್, ಸೋಫಾ ಸೆಟ್, ಟಿ.ವಿ., ಕೂಲರ್ ಮತ್ತು ಇತರ ಗೃಹೋಪಯೋಗಿ ವಸ್ತುಗಳನ್ನು ಜೊತೆಗೆ 4 ತೊಲೆ ಬಂಗಾರದ ಒಡವೆಗಳನ್ನು, 21 ಬಗೆಯ ಪಾತ್ರೆ ಸಾಮಾನುಗಳು ಮತ್ತು 2100/- ರೂ.ಗಳ ನಗದನ್ನು ನೀಡಿದ್ದೇನೆಂದು ಹೇಳಿದ್ದಾನೆ. ಆದರೆ ತನ್ನ ಮಗಳು, ತನ್ನ ಗಂಡನ ಮನೆಯವರಿಗೆ ಆ ವಸ್ತುಗಳು ತೃಪ್ತಿ ತಂದಿಲ್ಲವೆಂದು ತನಗೆ ಹೇಳಿದಳು. ತನ್ನ ಮಗಳು ಎರಡನೇ ಬಾರಿಗೆ ಗಂಡನ ಮನೆಗೆ ಹೋದಾಗ, ಆಪಾದಿತರೆಲ್ಲರೂ ಆಕೆಯನ್ನು ಹಂಗಿಸಲು ಪ್ರಾರಂಭಿಸಿದ್ದಾರೆ ಮತ್ತು ಮೋಟಾರ್ ಸೈಕೆಲ್‌ಗೆ ಬೇಡಿಕೆಯೊಡ್ಡಿ ಆಕೆಗೆ ಕಿರುಕುಳ ನೀಡಿದ್ದಾರೆ. ಆಕೆಯನ್ನು ತಿರುಗಿ ಗಂಡನ ಮನೆಯಿಂದ ಹೊಡೆದಟ್ಟಿದರು. ತದನಂತರ ಆಕೆ ತನ್ನೊಂದಿಗೆ (ಪಿ.ಡಬ್ಲ್ಯೂ.9) ಹದಿನಾಲ್ಕು ತಿಂಗಳುಗಳ ಕಾಲ ಜೊತೆಗಿದ್ದಳು. ಆನಂತರ ಹೇತಂಪುರದ ಸಂತಮನ್ ಸಿಂಗ್, ಕ್ರಿಷನ್ ಒಳಗೊಂಡ ಪಂಚಾಯಿತಿಯನ್ನು ಸೇರಿಸಿದೆ ಮತ್ತು ಇತರರು ಎಂದರೆ, ತನ್ನ ಸಹೋದರ ಸತ್ಯವಾನ್ ಮತ್ತು ಖೇರಾ ಗ್ರಾಮದಿಂದ ಬಂದ ತನ್ನ ಸೋದರ ಸಂಬಂಧಿಗಳೂ ಅಲ್ಲಿ ಇದ್ದರು. ಪಂಚಾಯಿತಿಯಲ್ಲಿ,

ಆಪಾದಿತರು ಇನ್ನು ಮುಂದೆ ಮೀನಾಳಿಗೆ ಕಿರುಕುಳ ಕೊಡುವುದಿಲ್ಲವೆಂದು ಭರವಸೆ ನೀಡಿ, ನಂತರ ಮಹಾವೀರ್ ಮತ್ತು ಚಮೇಲಿದೇವಿ ಬಂದು ಆಕೆಯನ್ನು ಕರೆದುಕೊಂಡು ಹೋದರು. ಆಕೆ ಸಾಯುವುದಕ್ಕಿಂತ ಸುಮಾರು ಹತ್ತು ತಿಂಗಳ ಮುಂಚೆ ಆಕೆಯನ್ನು ಆ ರೀತಿಯಲ್ಲಿ ಗಂಡನ ಮನೆಗೆ ಕಳುಹಿಸಿಕೊಡಲಾಯಿತು.

**4.** Bring about the differences between the following:- **3 x 5 = 15 Marks**

(a) Kidnapping and abduction.

(b) Voyeurism and stalking.

(c) Hurt and grievous hurt.

(d) Robbery and dacoity.

(e) Assault and criminal force.

ಈ ಕೆಳಗಿನವುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ:– **3 x 5 = 15 ಅಂಕಗಳು**

(ಎ) ವ್ಯವಹರಣ ಮತ್ತು ಅಪಹರಣ

(ಬಿ) ಲೈಂಗಿಕ ದರ್ಶನ ಮತ್ತು ಹಿಂಬಾಲಿಸುವುದು

(ಸಿ) ಗಾಯ ಮತ್ತು ತೀವ್ರ ಗಾಯ

(ಡಿ) ಸುಲಿಗೆ ಮತ್ತು ದರೋಡೆ

(ಇ) ಹಲ್ಲೆ ಮತ್ತು ಅಪರಾಧಿಕ ಬಲಪ್ರಯೋಗ

**5.** What is the difference between "Bail and Anticipatory Bail"? What are the conditions under which Bail can be taken in case of non-bailable offences when a person accused of/or suspected of commission of any non-bailable offence is arrested or detained. What factors must be taken into consideration before grant of an Anticipatory Bail? **10 Marks**

"ಜಾಮೀನು ಮತ್ತು ನಿರೀಕ್ಷಣಾ ಜಾಮೀನು" ಇವುಗಳ ನಡುವಿನ ವ್ಯತ್ಯಾಸಗಳು ಯಾವುದು? ಜಾಮೀನೀಯವಲ್ಲದ ಅಪರಾಧವನ್ನು ಮಾಡಿದ ಬಗ್ಗೆ ಆರೋಪಿಯನ್ನು / ಶಂಕಿತ ವ್ಯಕ್ತಿಯನ್ನು ಬಂಧಿಸಿದಾಗ ಜಾಮೀನು ತೆಗೆದುಕೊಳ್ಳಲು ಬೇಕಾಗಿರುವ ಷರತ್ತುಗಳು ಯಾವುದು? ನಿರೀಕ್ಷಣಾ ಜಾಮೀನು ಮಂಜೂರು ಮಾಡುವ ಮೊದಲು ಪರಿಗಣಿಸಬೇಕಾದ ಅಂಶಗಳು ಯಾವುವು? 10 ಅಂಕಗಳು

**6.** Section 25 of the Indian Evidence Act, 1872 states "No confession made to a Police Officer shall be proved as against a person accused of any offences". Elucidate on the Law of **10 Marks**

Confession with particular reference to Sections 24 to 30 of the said Act with relevant case law.

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 25 "ಪೋಲೀಸ್ ಅಧಿಕಾರಿಯ ಮುಂದೆ ಮಾಡಲಾದ ತಪ್ಪೊಪ್ಪಿಗೆಯನ್ನು ಯಾವುದೇ ಆರೋಪಕ್ಕೆ ಒಳಗಾದ ವ್ಯಕ್ತಿಯ ವಿರುದ್ಧ ಸಾಬೀತು ಮಾಡತಕ್ಕುದಲ್ಲ" ಎಂದು ಹೇಳುತ್ತದೆ. ತಪ್ಪೊಪ್ಪಿಗೆಗೆ ಸಂಬಂಧಿಸಿದ ಕಾನೂನುಗಳನ್ನು ಆ ಕಾಯಿದೆಯ ಕಲಂ 24 ರಿಂದ 30 ಮತ್ತು ಅದಕ್ಕೆ ಸಂಬಂಧಿಸಿದ ತೀರ್ಪುಗಳನ್ನು ಉಲ್ಲೇಖಿಸಿ ವಿವರಿಸಿ. 10 ಅಂಕಗಳು

**7.** Section 65 A of the Indian Evidence Act, 1872 states that the contents of electronic records may be proved in accordance with the provisions of Section 65 B. Explain the procedure with regard to admissibility of electronic records with reference to the procedure contemplated under Section 65 B and Section 67 A of the Act. **10 Marks**

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 65ಎ ಎಲೆಕ್ಟ್ರಾನಿಕ್ ದಾಖಲೆಗಳ ಒಳಾಂಶಗಳನ್ನು ಕಲಂ 65ಬಿ ಯ ಉಪಬಂಧಗಳ ಮೇರೆಗೆ ರುಜುವಾತು ಪಡಿಸಬಹುದು ಎಂದು ತಿಳಿಸುತ್ತದೆ. ಆ ಅಧಿನಿಯಮದ ಕಲಂ 65ಬಿ ಮತ್ತು ಕಲಂ 67ಎ ಗಳನ್ನು ಉಲ್ಲೇಖಿಸಿ ಎಲೆಕ್ಟ್ರಾನಿಕ್ ದಾಖಲೆಗಳ ಸ್ವೀಕಾರಾರ್ಹತೆಯ ವಿಧಾನಗಳನ್ನು ವಿವರಿಸಿ. 10 ಅಂಕಗಳು

**8.** Explain the presumptions under Sections 113A and 113B of the Indian Evidence Act, 1872 in the context of Section 498A and Section 304B of the Indian Penal Code, 1860 and Dowry Prohibition Act, 1961. **10 Marks**

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 113ಎ ಮತ್ತು 113ಬಿ ಅಡಿಯಲ್ಲಿನ ಪೂರ್ವಭಾವನೆಗಳನ್ನು ಭಾರತೀಯ ದಂಡ ಸಂಹಿತೆಯ, 1860ರ ಕಲಂ 498ಎ ಮತ್ತು ಕಲಂ 304ಬಿ ಮತ್ತು ವರದಕ್ಷಿಣೆ ನಿಷೇದ ಕಾಯಿದೆ, 1961ರ ಸನ್ನಿವೇಶದಲ್ಲಿ ವಿವರಿಸಿ. 10 ಅಂಕಗಳು

**9.** What are the orders that could be passed by a Juvenile Justice Board regarding a child found to be in conflict with law, under the provisions of the Juvenile Justice (Care and Protection of Children) Act, 2015? What are the orders that may not be passed against a child in conflict with law under the said Act? **10 Marks**

ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಮಗುವಿಗೆ ಸಂಬಂಧಿಸಿದಂತೆ ಬಾಲಾಪರಾಧಿ ನ್ಯಾಯ(ಮಗುವಿನ ಆರೈಕೆ ಮತ್ತು ರಕ್ಷಣೆ) ಕಾಯಿದೆ, 2015ರ ಅಡಿಯಲ್ಲಿ ಬಾಲಾಪರಾಧಿ ನ್ಯಾಯಮಂಡಳಿಯು ಮಾಡಬಹುದಾದ ಆದೇಶಗಳು ಯಾವುವು? ಆ ಕಾಯಿದೆಯ ಆಡಿಯಲ್ಲಿ ಸಂಘರ್ಷಕ್ಕೆ ಒಳಗಾದ ಮಗುವಿನ ವಿರುದ್ಧ ಮಾಡಲಾಗದ ಆದೇಶಗಳು ಯಾವುವು? 10 ಅಂಕಗಳು

**10.** Write short notes on **ANY TWO** of the following: **2 x 5 =10 Marks**

(a) Motive, preparation and conduct

(b) Dying declaration

(c) Victim Compensation Scheme

(d) Plea bargaining

ಈ ಕೆಳಗಿನ ಪೈಕಿ ಯಾವುದಾದರು ಎರಡರ ಕುರಿತು ಟಿಪ್ಪಣಿ ಬರೆಯಿರಿ: 2 x 5 =10 ಅಂಕಗಳು

(ಎ) ಉದ್ದೇಶ, ಸಿದ್ಧತೆ ಮತ್ತು ನಡವಳಿಕೆ

(ಬಿ) ಮರಣಪೂರ್ವ ಹೇಳಿಕೆ

(ಸಿ) ನೊಂದ ವ್ಯಕ್ತಿಗೆ ಪರಿಹಾರ ಯೋಜನೆ

(ಡಿ) ಅಪಾದನೆಯ ರಾಜಿ

**11. Write a judgment on the basis of following facts and evidence with reference to relevant provisions of law and case law: 30 Marks**

The Nelamangala Rural Police have filed the charge sheet by alleging that the accused has committed an offence punishable under Section 302 of Indian Penal Code.

**Facts of the Case:**

Accused and deceased Rajesh were working on the land belonging to one Akbar (Complainant) at Dabaspete and all of them were staying in a hut put up on that land. On 29.05.2015 at about 10.00 p.m. the accused picked up a quarrel with deceased Rajesh suspecting that deceased had illicit connection with the wife of the accused and assaulted him with a chopper on his head, chest and legs, due to which deceased sustained fatal injuries and died at the spot.

On the basis of the complaint lodged by complainant (CW1) Nelamangala Rural Police registered FIR in Crime No.212/2015 and

the Investigating Officer visited the spot and drew the spot mahazar and collected the sample mud and mud mixed with blood from the spot and shifted the dead body of the deceased to the Government Hospital, Nelamangala and conducted the inquest panchanama and arrested the accused, recorded his voluntary statement and T-shirt and chopper used for commission of offence were seized and sent to the forensic laboratory. After completion of investigation, CW.11 filed the charge sheet against the accused.

The Court took cognizance and accused was produced before the Court and was remanded to Judicial Custody and framed the charge against the accused. Accused pleaded not guilty.

To bring home the guilt of the accused, prosecution examined 6 witnesses as PW1 to 6 and marked Ex.P1 to P8 documents and MO1 to 4 Material Objects.

**Evidence of the Prosecution:**

CW1 Akbar, who was examined as PW1, deposed that they own land at Dabaspete and the accused, deceased Rajesh and a few others were working on the said land and all of them were staying in a hut put up on that land. PW1 further deposed that on 30.05.2015 he received information about the quarrel between accused and deceased Rajesh on their land and when he visited the spot, he found the dead body of deceased Rajesh. PW1 further deposed that immediately he went to the Nelamangala Rural Police Station and lodged a complaint as per Ex.P1. PW1 further deposed that on the same day police came to the spot and drew a mahazar as per Ex.P2 and collected the sample mud (MO1) and mud mixed with blood (MO2) from the spot. PW1 further deposed that

subsequently he came to know that deceased had illicit relationship with the wife of the accused due to which he had killed him.

During the course of his cross examination PW1 denied the suggestion that nobody had informed him about the quarrel between accused and deceased and neither of them were working in his land. PW1 denied the suggestion that there was no such illicit connection between the wife of the accused and deceased. PW1 denied the suggestion that no mahazar was drawn in his presence and MO1 and 2 were not recovered from the spot in his presence. PW1 denied the suggestion that he had lodged a false complaint.

CW2 Aslam was examined as PW2 and he deposed that Nelamangala Police had shown the accused to him in the Police Station and there after accused took them to a land in Dabaspete and had shown the hidden T-shirt (MO3) and chopper (MO4) and same were recovered by drawing a mahazar as per Ex.P3.

PW2 during the course of his cross examination denied the suggestion that accused was not in the Police Station and he had not taken them to any place and MO3 and 4 were not recovered at the instance of the accused.

CW7 Ramesha who was examined as PW3 deposed that Police had drawn the inquest panchanama on the dead body of deceased Rajesh at Government Hospital, Nelamangala as Ex.P4.

PW3 during the course of his cross examination denied the suggestion that no inquest panchanama was drawn in his presence and he put the signature for the said panchanama in the Police Station.

CW9 Dr.Sumanth was examined as PW4 and he deposed that on 31.05.2015 between 10.00 a.m. and 12.00 noon he conducted the port mortem on the dead body of Rajesh and issued the PM report as per Ex.P5. PW4 further deposed that he noticed external injuries on the skull, chest, hands and legs of the dead body which can be caused due to assault with a chopper like MO4.

During the course of his cross examination PW4 denied the suggestion that injuries mentioned in Ex.P5 PM report cannot be caused by MO4 chopper. PW4 denied the suggestion that as per the request of the Police, he has given a false report as per Ex.P5.

CW10, Nataraj who was examined as PW5, deposed that when he was working as PSI at Nelamangala Rural Police Station on 30.05.2015 at 11.00 a.m. CW1 appeared before the Police Station and lodged a compliant as per Ex.P1, on the basis of which he had registered the FIR as per Ex.P6 and handed over the file to CW11 for further investigation.

During the course of investigation PW5 denied the suggestion that on the basis of the false complaint he had registered a false case without any enquiry and verification.

CW11, Rudrappa who was examined as PW6, deposed that during the year 2015 he was working as a Circle Inspector of Police at Nelamangala Rural Police Station and on 30.05.2015 he received the file relating to this case from CW10 and continued further investigation and proceeded to the spot and drew the spot mahazar and recovered MO1 and 2 from the spot. PW6 further deposed that he sent the dead body to the Nelamangala Government Hospital and

drew a inquest mahazar as per Ex.P4. PW6 further deposed that on 01.06.2015 he had arrested the accused and recorded his voluntary statement as per Ex.P7 and on the basis of which, accused took them to the spot and showed the hidden T-shirt(MO1) and chopper(MO2) and same were seized by drawing a mahazar as per Ex.P3. PW6 further deposed that he had sent the MO1 to 4 to the forensic laboratory and after getting the PM report(Ex.P5) and FSL report(Ex.P8) and after completion of investigation he had filed the charge sheet.

During the course of his cross examination PW6 denied the suggestion that he had not visited the spot and not recovered MO1 and 2 and Ex.P2 mahazar was prepared in the Police Station. PW6 also denied the suggestion that he did not conduct the inquest panchanama as per Ex.P4 in the hospital. PW6 denied the suggestion that accused had not given any voluntary statement before him and no recovery was made in pursuance to his statement. PW6 denied the suggestion that MO3 and 4 were created for the purpose of this case. PW6 denied the suggestion that without proper investigation he filed a false charge sheet against the accused.

**List of witnesses examined on behalf of the prosecution:**

1. CW1 / PW1 – Akbar
2. CW2 / PW2 – Aslam
3. CW7 / PW3 – Ramesh
4. CW9 / PW4 – Dr.Sumanth
5. CW10 / PW5 – Nataraj
6. CW11 / PW6 – Rudrappa

**List of exhibits marked on behalf of the prosecution:**

1. Ex.P1 – Complaint
2. Ex.P2 – Spot and Recovery mahazar
3. Ex.P3 – Recovery Mahazar
4. Ex.P4 – Inquest Panchanama
5. Ex.P5 – PM Report
6. Ex.P6 – FIR
7. Ex.P7 – Voluntary Statement of the accused
8. Ex.P8 – FSL Report

**List of material objects:**

1. MO1 – Sample Mud
2. MO2 – Mud mixed with blood
3. MO3 – T-shirt
4. MO4 - Chopper

The statement of the accused under Section 313 of Code of Criminal Procedure, was recorded and accused denied the incriminating evidence against him as false and did not offer any defence evidence.

**ARGUMENTS FOR THE PROSECUTION**

The learned Public Prosecutor argued that the prosecution has let in evidence to prove the guilt of the accused by examining the PW1 to 6 and by producing the documents as per Ex.P1 to 8 and MO1 to 4. It was further argued that though all these witnesses were cross examined by the learned counsel for the accused, no material aspects were brought out from their cross examination. It was further argued by the learned Public Prosecutor that the evidence let in by the prosecution is free from any infirmity and

would establish the case of the prosecution beyond all reasonable doubt. Therefore, the learned Public Prosecutor prayed to convict the accused.

**ARGUMENTS FOR THE ACCUSED**

The learned counsel for the accused argued that evidence let in by the prosecution is full of material contradictions, variations and discrepancies. It was further argued by the Counsel for the accused that there is no direct evidence to prove the guilt of the accused and evidence let in by the prosecution miserably failed to connect the circumstances to bring home the guilt of the accused. On all these grounds, learned counsel for the accused prayed to acquit the accused by extending the benefit of doubt to him.

**ಈ ಕೆಳಗಿನ ಸಂಗತಿಗಳು ಮತ್ತು ಸಾಕ್ಷಿಗಳ ಆಧಾರದ ಮೇಲೆ ಸಂಬಂಧಿಸಿದ ಕಾನೂನಿನ ನಿಭಂದನೆಗಳನ್ನು ಮತ್ತು ತೀರ್ಪುಗಳನ್ನು ಉಲ್ಲೇಖಿಸಿ ತೀರ್ಪು ಬರೆಯಿರಿ:** **30 ಅಂಕಗಳು**

ನೆಲಮಂಗಲ ಗ್ರಾಮಾಂತರ ಪೋಲೀಸರು ಭಾರತೀಯ ದಂಡ ಸಂಹಿತೆಯ ಕಲಂ 302ರಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ಪ್ರಕರಣದ ವಿವರ:

ಆರೋಪಿ ಮತ್ತು ಮೃತ ರಾಜೇಶ ದಾಬಸ್‌ಪೇಟೆಯಲ್ಲಿರುವ ಓರ್ವ ಅಕ್ಬರ್(ಫಿರ್ಯಾದಿ)ಗೆ ಸೇರಿದ ಜಮೀನಿನಲ್ಲಿ ಕೆಲಸ ಮಾಡಿಕೊಂಡಿದ್ದರು ಮತ್ತು ಅವರೆಲ್ಲರು ಅದೇ ಜಮೀನಿನಲ್ಲಿ ಹಾಕಿದ ಗುಡಿಸಲಿನಲ್ಲಿ ವಾಸಮಾಡಿಕೊಂಡಿದ್ದರು. ದಿನಾಂಕ 29.05.2015ರಂದು ರಾತ್ರಿ ಸುಮಾರು 10.00 ಗಂಟೆಗೆ ಆರೋಪಿಯು ಮೃತ ರಾಜೇಶನೊಂದಿಗೆ ಆತ ತನ್ನ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಹೊಂದಿಕೊಂಡಿದ್ದಾನೆ ಎಂದು ಸಂಶಯಪಟ್ಟು, ಆತನೊಂದಿಗೆ ಜಗಳ ತೆಗೆದು ಕತ್ತಿಯಿಂದ ಆತನ ತಲೆ, ಎದೆ ಮತ್ತು ಕಾಲುಗಳ ಮೇಲೆ ಹೊಡೆದು ಹಲ್ಲೆ ಮಾಡಿದ್ದರಿಂದ ಮೃತನಿಗೆ ಮಾರಣಾಂತಿಕ ಗಾಯಗಳಾಗಿ ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದನು.

ಫಿರ್ಯಾಧಿ(ಚಾ.ಸಾ.1) ಕೊಟ್ಟ ದೂರಿನ ಆಧಾರದಲ್ಲಿ ನೆಲಮಂಗಲ ಗ್ರಾಮಾಂತರ ಪೋಲೀಸರು ಪ್ರಕರಣ ಸಂಖ್ಯೆ 212/2015ರಲ್ಲಿ ಒಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ತನಿಖಾಧಿಕಾರಿ ಸ್ಥಳಕ್ಕೆ ಹೋಗಿ ಸ್ಥಳ ಮಹಜರನ್ನು ಮಾಡಿ ಸ್ಥಳದಿಂದ ಮಾದರಿ ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣನ್ನು ಸಂಗ್ರಹಿಸಿ ಮೃತನ ಮೃತ ದೇಹವನ್ನು ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟು ಶವ ಪಂಚನಾಮೆಯನ್ನು ಮಾಡಿ, ಬಳಿಕ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿಕೊಂಡು ಟೀಶರ್ಟ್ ಮತ್ತು ಕೃತ್ಯಕ್ಕೆ ಉಪಯೋಗಿಸಿದ ಕತ್ತಿಯನ್ನು ಅಮಾನತ್ತು ಪಡಿಸಿಕೊಂಡು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟು ತನಿಖೆಯನ್ನು ಪೂರೈಸಿ ಚಾ.ಸಾ.11 ರವರು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ನ್ಯಾಯಾಲಯವು ಸಂಜ್ಞೆಯನ್ನು ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿದಾಗ ಆರೋಪಿಯು ತಾನು ತಪ್ಪು ಮಾಡಿಲ್ಲವೆಂದು ಹೇಳಿದನು.

ಆರೋಪಿಯ ವಿರುದ್ಧದ ಆರೋಪವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ಆರು ಸಾಕ್ಷಿಗಳನ್ನು ಅ.ಸಾ.1 ರಿಂದ 6 ಎಂದು ಸಾಕ್ಷಿ ವಿಚಾರಣೆ ಮಾಡಿ ನಿಶಾನೆ ಪಿ.1 ರಿಂದ ಪಿ.8 ದಾಖಲಾತಿಗಳನ್ನು ಮತ್ತು ಮುದ್ದೆಮಾಲು 1 ರಿಂದ 4 ವಸ್ತುಗಳನ್ನು ಗುರುತಿಸಿಕೊಂಡಿದೆ.

<u>ಅಭಿಯೋಜನ ಸಾಕ್ಷಿ</u>

ಚಾ.ಸಾ.1 ಅಕ್ಬರ್ ಅ.ಸಾ.1 ಎಂದು ಸಾಕ್ಷಿ ನುಡಿಯುತ್ತಾ ಅವರಿಗೆ ದಾಬಸ್‌ಪೇಟೆಯಲ್ಲಿ ಜಮೀನು ಇದ್ದು ಆರೋಪಿ, ಮೃತ ರಾಜೇಶ ಮತ್ತು ಇತರ ಕೆಲವರು ಆ ಜಮೀನಿನಲ್ಲಿ ಕೆಲಸ ಮಾಡಿಕೊಂಡಿದ್ದು ಅವರೆಲ್ಲರು ಅದೇ ಜಮೀನಿನಲ್ಲಿ ಕಟ್ಟಿದ ಒಂದು ಗುಡಿಸಲಿನಲ್ಲಿ ವಾಸ ಮಾಡಿಕೊಂಡಿದ್ದರು ಎನ್ನುತ್ತಾರೆ. ಅ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ದಿನಾಂಕ 30.05.2015ರಂದು ಆರೋಪಿ ಮತ್ತು ಮೃತ ರಾಜೇಶನ ನಡುವೆ ಅವರ ಜಮೀನಿನಲ್ಲಿ ಜಗಳ ಆಗುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಆ ಪ್ರಕಾರ ಆತನು ಅಲ್ಲಿ ಹೋದಾಗ ಮೃತ ರಾಜೇಶನ ಶವವನ್ನು ನೋಡಿದೆ ಎನ್ನುತ್ತಾರೆ. ಅ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ಕೂಡಲೆ ತಾನು ನೆಲಮಂಗಲ ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ ನಿಶಾನೆ ಪಿ.1 ರಂತೆ ಒಂದು ದೂರು ದಾಖಲು ಮಾಡಿದ್ದೆ ಎನ್ನುತ್ತಾರೆ. ಅ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ಅದೇ ದಿನ ಪೋಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ.2 ರಂತೆ ಒಂದು ಮಹಜರನ್ನು ಮಾಡಿ ಸ್ಥಳದಿಂದ ಮಾದರಿ ಮಣ್ಣು (ಮು.ಮಾ.1) ಮತ್ತು ರಕ್ತ ಮಿಶ್ರಿತ ಮಣ್ಣು (ಮು.ಮಾ.2) ಸಂಗ್ರಹಿಸಿದ್ದರು ಎಂದು ನುಡಿಯುತ್ತಾರೆ. ಅ.ಸಾ.1

ಮುಂದುವರಿದು ಬಳಿಕ ತನಗೆ ಮೃತನು ತನ್ನ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರಿಂದ ಆರೋಪಿ ಆತನನ್ನು ಕೊಲೆ ಮಾಡಿದ ಎಂದು ತಿಳಿದು ಬಂತು ಎಂದು ಸಾಕ್ಷಿ ನುಡಿಯುತ್ತಾರೆ.

ಅ.ಸಾ.1 ತನ್ನ ಪಾಟೀ ಸವಾಲಿನಲ್ಲಿ ಆರೋಪಿ ಮತ್ತು ಮೃತ ತನ್ನ ಜಮೀನಿನಲ್ಲಿ ಕೆಲಸ ಮಾಡಿಕೊಂಡಿರಲಿಲ್ಲ ಮತ್ತು ಅವರ ನಡುವೆ ಜಗಳವಾದ ಬಗ್ಗೆ ತನಗೆ ಯಾರು ಮಾಹಿತಿ ಕೊಟ್ಟಿರಲಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.1 ಆರೋಪಿಯ ಹೆಂಡತಿ ಮತ್ತು ಮೃತನ ನಡುವೆ ಯಾವುದೇ ಅಕ್ರಮ ಸಂಬಂಧ ಇರಲಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.1 ತನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲ ಮತ್ತು ಮು.ಮಾ.1 ಮತ್ತು 2ನ್ನು ತನ್ನ ಸಮಕ್ಷಮ ಸ್ಥಳದಿಂದ ಅಮಾನತ್ತು ಮಾಡಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.1 ತಾನು ಒಂದು ಸುಳ್ಳು ಫಿರ್ಯಾದಿಯನ್ನು ಸಲ್ಲಿಸಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ಚಾ.ಸಾ.2 ಅಸ್ಲಾಂ ಅ.ಸಾ.2 ಎಂದು ಸಾಕ್ಷಿ ನುಡಿಯುತ್ತಾ ನೆಲಮಂಗಲ ಗ್ರಾಮಾಂತರ ಪೋಲೀಸರು ಪೋಲೀಸ್ ಠಾಣೆಯಲ್ಲಿದ ಆರೋಪಿಯನ್ನು ತನಗೆ ತೋರಿಸಿದ್ದರು ಮತ್ತು ಆ ಬಳಿಕ ಆರೋಪಿಯು ಅವರನ್ನು ದಾಬಸ್‌ಪೇಟೆಯ ಒಂದು ಜಮೀನಿಗೆ ಕರೆದುಕೊಂಡು ಹೋಗಿ ಅಲ್ಲಿ ಅಡಗಿಸಿಟ್ಟಿದ್ದ ಟೀಶರ್ಟ್ (ಮು.ಮಾ.3) ಮತ್ತು ಕತ್ತಿ (ಮು.ಮಾ.4)ಗಳನ್ನು ತೋರಿಸಿದ್ದು ಅವುಗಳನ್ನು ನಿಶಾನೆ ಪಿ.3 ಮಹಜರನ್ನು ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದು ನುಡಿಯುತ್ತಾರೆ.

ಅ.ಸಾ.2 ತನ್ನ ಪಾಟೀ ಸವಾಲಿನಲ್ಲಿ ಆರೋಪಿಯು ಪೋಲೀಸ್ ಠಾಣೆಯಲ್ಲಿ ಇರಲಿಲ್ಲ ಮತ್ತು ಆತ ತಮ್ಮನ್ನು ಯಾವುದೇ ಜಾಗಕ್ಕೂ ಕರೆದುಕೊಂಡು ಹೋಗಿಲ್ಲ ಮತ್ತು ಮು.ಮಾ.3 ಮತ್ತು 4ನ್ನು ಆರೋಪಿಯು ತೋರಿಸಿಕೊಟ್ಟ ಪ್ರಕಾರ ಅಮಾನತ್ತು ಪಡಿಸಿಕೊಂಡಿರಲಿಲ್ಲ ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ.

ಚಾ.ಸಾ.7 ರಮೇಶ ಅ.ಸಾ.3 ಎಂದು ಸಾಕ್ಷಿ ನುಡಿಯುತ್ತಾ ಪೋಲೀಸರು ಮೃತ ರಾಜೇಶನ ಶವದ ಮೇಲೆ ನೆಲಮಂಗಲದ ಸರ್ಕಾರಿ ಆಸ್ಪತ್ರೆಯಲ್ಲಿ ನಿಶಾನೆ ಪಿ.4ರಂತೆ ಶವ ಪಂಚನಾಮೆಯನ್ನು ಮಾಡಿದ್ದರು ಎಂದು ನುಡಿಯುತ್ತಾರೆ.

ಅ.ಸಾ.3 ತನ್ನ ಪಾಟೀ ಸವಾಲಿನಲ್ಲಿ ತನ್ನ ಸಮಕ್ಷಮ ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲ ಮತ್ತು ತಾನು ಆ ಪಂಚನಾಮೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ಚಾ.ಸಾ.9 ಡಾ.ಸುಮಂತ್ ಅ.ಸಾ.4 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 31.05.2015ರಂದು ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯ ಅವಧಿಯಲ್ಲಿ ತಾನು ರಾಜೇಶನ ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ನಡೆಸಿ ನಿಶಾನೆ ಪಿ.5 ರಂತೆ ಮರಣೋತ್ತರಾ ಪರೀಕ್ಷಾ ವರದಿಯನ್ನು ನೀಡಿದ್ದೆ ಎನ್ನುತ್ತಾರೆ. ಅ.ಸಾ.4 ಮುಂದುವರಿದು ಮೃತ ದೇಹದ ತಲೆಬುರುಡೆ, ಎದೆ, ಕೈಗಳು ಮತ್ತು ಕಾಲಿನ ಮೇಲೆ ಬಾಹ್ಯ ಗಾಯಗಳಾಗಿರುವುದನ್ನು ಗುರುತಿಸಿದ್ದು ಅವುಗಳು ಮು.ಮಾ.4 ರೀತಿಯ ಕತ್ತಿಯಿಂದ ಹಲ್ಲೆ ಮಾಡಿದಲ್ಲಿ ಆಗುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ.

ಅ.ಸಾ.4 ತನ್ನ ಪಾಟೀ ಸವಾಲಿನಲ್ಲಿ ನಿಶಾನೆ ಪಿ.5 ಮರಣೋತ್ತರ ಪರೀಕ್ಷಾ ವರದಿಯಲ್ಲಿ ಕಾಣಿಸಿರುವ ಗಾಯಗಳು ಮು.ಮಾ.4 ಕತ್ತಿಯಿಂದ ಹೊಡೆದಲ್ಲಿ ಆಗುವುದಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.4 ತಾನು ಪೋಲೀಸರ ಕೋರಿಕೆಯ ಮೇರೆಗೆ ನಿಶಾನೆ ಪಿ.5 ರಂತೆ ಒಂದು ಸುಳ್ಳು ವರದಿಯನ್ನು ಕೊಟ್ಟಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ಚಾ.ಸಾ.10 ನಟರಾಜ್ ಅ.ಸಾ.5 ಎಂದು ಸಾಕ್ಷಿ ನುಡಿಯುತ್ತಾ ತಾನು ನೆಲಮಂಗಲ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 30.05.2015ರಂದು ಬೆಳಗ್ಗೆ 11.00 ಗಂಟೆಗೆ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನಿಶಾನೆ ಪಿ.1 ರಂತೆ ಕೊಟ್ಟ ದೂರಿನ ಆಧಾರದ ಮೇಲೆ ತಾನು ನಿಶಾನೆ ಪಿ.6 ರಂತೆ ಪ್ರಥಮಾ ವರ್ತಮಾನ ವರದಿಯನ್ನು ದಾಖಲು ಮಾಡಿಕೊಂಡು ಬಳಿಕ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಬಗ್ಗೆ ಚಾ.ಸಾ.11 ರವರಿಗೆ ಹಸ್ತಾಂತರಿಸಿದ್ದೆ ಎನ್ನುತ್ತಾರೆ.

ಅ.ಸಾ.5 ತನ್ನ ಪಾಟೀ ಸವಾಲಿನಲ್ಲಿ ಒಂದು ಸುಳ್ಳು ಫಿರ್ಯಾದಿಯ ಆಧಾರದ ಮೇಲೆ ತಾನು ಯಾವುದೇ ರೀತಿಯ ವಿಚಾರಣೆ ಮತ್ತು ಪರಿಶೀಲನೆಯನ್ನು ನಡೆಸದೆ ಒಂದು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

ಚಾ.ಸಾ.11 ರುದ್ರಪ್ಪ ಅ.ಸಾ.6 ಎಂದು ಸಾಕ್ಷಿ ನುಡಿಯುತ್ತಾ 2015ನೇ ಸಾಲಿನಲ್ಲಿ ತಾನು ನೆಲಮಂಗಲ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಮತ್ತು ದಿನಾಂಕ 30.05.2015ರಂದು ತಾನು ಈ ಪ್ರಕರಣದ ಕಡತವನ್ನು ಚಾ.ಸಾ.10 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಸ್ಥಳಕ್ಕೆ ಹೋಗಿ ಸ್ಥಳ ಮಹಜರನ್ನು ನಡೆಸಿ ಮು.ಮಾ 1 ಮತ್ತು 2ನ್ನು ಸ್ಥಳದಿಂದ ಅಮಾನತ್ತು ಪಡಿಸಿಕೊಂಡಿದ್ದೆ ಎನ್ನುತ್ತಾರೆ. ಅ.ಸಾ.6 ಮುಂದುವರಿದು ತಾನು ಮೃತ ದೇಹವನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟು ನಿಶಾನೆ ಪಿ.4 ರಂತೆ ಶವ ಪಂಚನಾಮೆಯನ್ನು ಮಾಡಿದ್ದೆ ಎಂದು ಸಾಕ್ಷಿ

ನುಡಿಯುತ್ತಾರೆ. ಅ.ಸಾ.6 ಮುಂದುವರಿದು ದಿನಾಂಕ 01.06.2015ರಂದು ತಾನು ಆರೋಪಿಯನ್ನು ದಸ್ತಗಿರಿ ಮಾಡಿ ನಿಶಾನೆ ಪಿ.7ರಂತೆ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡು ಆ ಪ್ರಕಾರ ಆರೋಪಿಯು ತಮ್ಮನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅಡಗಿಸಿಟ್ಟಿದ್ದ ಟೀಶರ್ಟ್ (ಮು.ಮಾ.3) ಮತ್ತು ಕತ್ತಿ (ಮು.ಮಾ.4)ನ್ನು ತೋರಿಸಿಕೊಟ್ಟಿದ್ದು ಅವುಗಳನ್ನು ನಿಶಾನೆ ಪಿ.3 ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅ.ಸಾ.6 ಮುಂದುವರಿದು ತಾನು ಮು.ಮಾ.1 ರಿಂದ 4ನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟು ಮರಣೋತ್ತರ ಪರೀಕ್ಷಾ ವರದಿ (ನಿಶಾನೆ ಪಿ.5) ಮತ್ತು ವಿಧಿ ವಿಜ್ಞಾನ ವರದಿಯನ್ನು (ನಿಶಾನೆ ಪಿ.8)ರಂತೆ ಸ್ವೀಕರಿಸಿ ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

ಅ.ಸಾ.6 ತನ್ನ ಪಾಟೀ ಸವಾಲಿನಲ್ಲಿ ತಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಮು.ಮಾ.1 ಮತ್ತು 2 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ನಿಶಾನೆ ಪಿ.2 ಮಹಜರನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಲಾಗಿತ್ತು ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ. ಅ.ಸಾ.6 ತಾನು ನಿಶಾನೆ ಪಿ.4 ರಂತೆ ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಮಾಡಿಲ್ಲ ಎನ್ನುವ ಸೂಚನೆಯನ್ನು ಕೂಡ ನಿರಾಕರಿಸಿದ್ದಾರೆ. ಅ.ಸಾ.6 ಆರೋಪಿಯು ತನ್ನ ಮುಂದೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ಕೊಟ್ಟಿಲ್ಲ ಮತ್ತು ಆ ಹೇಳಿಕೆಯ ಆಧಾರದ ಮೇಲೆ ಯಾವುದೇ ಅಮಾನತ್ತು ಮಾಡಲಾಗಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.6 ಮು.ಮಾ.3 ಮತ್ತು 4ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಲಾಗಿದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅ.ಸಾ.6 ತಾನು ಸರಿಯಾಗಿ ತನಿಖೆಯನ್ನು ನಡೆಸದೆ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

<u>**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿ:**</u>

1. ಚಾ.ಸಾ.1 / ಅ.ಸಾ.1 – ಅಕ್ಬರ್
2. ಚಾ.ಸಾ.2 / ಅ.ಸಾ.2 -- ಅಸ್ಲಂ
3. ಚಾ.ಸಾ.7 / ಅ.ಸಾ.3 – ರಮೇಶ್
4. ಚಾ.ಸಾ.9 / ಅ.ಸಾ.4 – ಡಾ.ಸುಮಂತ್
5. ಚಾ.ಸಾ.10 / ಅ.ಸಾ.5 – ನಟರಾಜ್
6. ಚ.ಸಾ.11 / ಅ.ಸಾ.6 – ರುದ್ರಪ್ಪ

**ಅಭಿಯೋಜನೆ ಪರ ಗುರುತು ಮಾಡಿದ ದಾಖಲಾತಿಗಳ ಪಟ್ಟಿ:**

1. ನಿಶಾನೆ ಪಿ.1 – ಫಿರ್ಯಾದಿ
2. ನಿಶಾನೆ ಪಿ.2 – ಸ್ಥಳ ಮತ್ತು ಅಮಾನತ್ತು ಮಹಜರ್
3. ನಿಶಾನೆ ಪಿ.3 – ಅಮಾನತ್ತು ಮಾಹಜರ್
4. ನಿಶಾನೆ ಪಿ.4 – ಶವ ಪಂಚನಾಮೆ
5. ನಿಶಾನೆ ಪಿ.5 – ಮರಣೋತ್ತರ ಪರೀಕ್ಷಾ ವರದಿ
6. ನಿಶಾನೆ ಪಿ.6 – ಪ್ರಥಮ ವರ್ತಮಾನ ವರದಿ
7. ನಿಶಾನೆ ಪಿ.7 – ಆರೋಪಿಯ ಸ್ವಇಚ್ಛಾ ಹೇಳಿಕೆ
8. ನಿಶಾನೆ ಪಿ.8 – ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ

**ಮುದ್ದೆ ಮಾಲು ಪಟ್ಟಿ:**

1. ಮು.ಮಾ.1 – ಮಾದರಿ ಮಣ್ಣು
2. ಮು.ಮಾ.2 – ರಕ್ತಮಿಶ್ರಿತ ಮಣ್ಣು
3. ಮು.ಮಾ.3 – ಟೀಶರ್ಟ್
4. ಮು.ಮಾ.4 – ಕತ್ತಿ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಲಾಗಿದ್ದು ಆರೋಪಿಯು ತನ್ನ ವಿರುದ್ಧ ಇರುವ ಸಾಕ್ಷಿಯನ್ನು ಸುಳ್ಳು ಎಂದು ಹೇಳಿದ್ದು ತನ್ನ ಪರವಾಗಿ ಯಾವುದೇ ಪ್ರತಿರಕ್ಷಾ ಸಾಕ್ಷ್ಯವನ್ನು ಕೊಟ್ಟಿಲ್ಲ.

**ಅಭಿಯೋಜನೆಯ ಪರ ವಾದ**

ಮಾನ್ಯ ಸರ್ಕಾರಿ ಅಭಿಯೋಜಕರು ಅಭಿಯೋಜನೆಯು ಅ.ಸಾ.1 ರಿಂದ 6 ಸಾಕ್ಷಿದಾರರನ್ನು ವಿಚಾರಣೆ ಮಾಡಿ ಮತ್ತು ನಿಶಾನೆ ಪಿ.1 ರಿಂದ 8 ದಾಖಲಾತಿಗಳನ್ನು ಮತ್ತು ಮು.ಮಾ.1 ರಿಂದ 4 ವಸ್ತುಗಳನ್ನು ಹಾಜರು ಪಡಿಸಿ ಆರೋಪಿಯ ವಿರುದ್ಧದ ಆರೋಪವನ್ನು ಸಾಬೀತು ಪಡಿಸಿದೆ ಎಂದು ವಾದಿಸುತ್ತಾರೆ. ಮುಂದುವರಿದು ಈ ಎಲ್ಲಾ ಸಾಕ್ಷಿದಾರರನ್ನು ಆರೋಪಿ ಪರ ಮಾನ್ಯ ವಕೀಲರು ಪಾಟೀ ಸವಾಲು ಮಾಡಿದ್ದರು ಕೂಡ ಅವರ ಪಾಟೀ ಸವಾಲಿನಲ್ಲಿ ಯಾವುದೇ ಪ್ರಮುಖ ಅಂಶಗಳನ್ನು ಹೊರತರಲು ಆಗಿಲ್ಲ ಎಂದು ವಾದಿಸುತ್ತಾರೆ. ಮಾನ್ಯ ಸರ್ಕಾರಿ ಅಭಿಯೋಜಕರು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಯಾವುದೇ ದುರ್ಬಲತೆಯಿಂದ ಹೊರತಾಗಿದ್ದು ಅಭಿಯೋಜನೆಯ ಪ್ರಕರಣವನ್ನು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆ ಎಂದು ವಾದಿಸುತ್ತಾರೆ. ಆದುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರು ಆರೋಪಿಯನ್ನು ಶಿಕ್ಷಿಸಲು ಕೋರುತ್ತಾರೆ.

**ಆರೋಪಿಯ ಪರ ವಾದ**

ಆರೋಪಿ ಪರ ಮಾನ್ಯ ವಕೀಲರು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷ್ಯದಲ್ಲಿ ತುಂಬ ವಿರೋದಾಬಾಸಗಳು, ವ್ಯತ್ಯಾಸಗಳು ಮತ್ತು ನ್ಯೂನ್ಯತೆಗಳು ಇವೆ ಎಂದು ವಾದಿಸುತ್ತಾರೆ. ಆರೋಪಿಪರ ಮಾನ್ಯ ವಕೀಲರು ಮುಂದುವರಿದು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸಲು ಯಾವುದೇ ನೇರವಾದ ಸಾಕ್ಷಿ ಇರುವುದಿಲ್ಲ ಮತ್ತು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ಸಂದರ್ಭಗಳನ್ನು ಸಂಪರ್ಕಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಆರೋಪಿ ಪರ ಮಾನ್ಯ ವಕೀಲರು ಆರೋಪಿಗೆ ಸಂಶಯದ ಲಾಭವನ್ನು ನೀಡಿ ಬಿಡುಗಡೆ ಮಾಡಲು ಕೋರಿಕೊಂಡಿದ್ದಾರೆ.

*******